# ಬೆಳಗಾವಿ ವಾರ್ತೆ

ಕನ್ನಡ ದಿನ ಪತ್ರಿಕೆ, ಬೆಳಗಾವಿ

ಸಂಪಾದಕರು: ಮಹೇಶ್ವರಿ ಭೀಮಶಿ ಭರಮಣ್ಣವರ

EDITOR: MAHESHWARI BHIMASHI BHARAMANNAVARA

BELAGAVI VARTE

KANNADA DAILY MORNING BELAGAVI

G-mail: belagavivarte1@gmail.com

epaper. belagavivarte.com

Volume: 01 | Issue : 31 | TUESDAY 07-04-2026 | PRGI No : KNKAN/26/A0962 | Pages:4 | Rs.2.00 | M: 9742418836


## ಪ್ರಧಾನಿ ಮೋದಿ ಸಾಲ ಮಾಡಿಲ್ಲವೇ? ಅಚ್ಛೇ ದಿನ್ ಯಾರಿಗಾದರೂ ಬಂದಿದೆಯೇ?: ಡಿ.ಕೆ ಶಿವಕುಮಾರ್



ದಾವಣಗೆರೆ: ಬಿಜೆಪಿ ನಾಯಕರು ನಮ್ಮನ್ನು 'ಸಾಲದ ಸರ್ಕಾರ' ಎಂದು ಕರೆಯುತ್ತಿದ್ದಾರೆ. ಆದರೆ, ಕೇಂದ್ರದ ನರೇಂದ್ರ ಮೋದಿ ಸರ್ಕಾರ ಸಾಲವನ್ನೇ ಮಾಡಿಲ್ಲವೇ? ಎಂದು ಉಪ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರು ಶುಕ್ರವಾರ ಪ್ರಶ್ನೆ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ನಾಯಕರು ನಮ್ಮನ್ನು 'ಸಾಲದ ಸರ್ಕಾರ' ಎಂದು ಕರೆಯುತ್ತಿದ್ದಾರೆ. ಆದರೆ ಕೇಂದ್ರದ ನರೇಂದ್ರ ಮೋದಿ ಸರ್ಕಾರ ಸಾಲ ಪಡೆದಿಲ್ಲವೇ? ಬೆಲೆ ಏರಿಕೆಯನ್ನು ನಿಯಂತ್ರಿಸಲು ಕೇಂದ್ರ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ನಾವು ಜನರ ಕೈಗೆ ಹಣ ನೀಡುತ್ತಿದ್ದೇವೆ ಎಂದು ಹೇಳಿದರು.

ಮೋದಿ ಅವರು ದೇಶದ ಪ್ರತಿಯೊಬ್ಬರ ಅಕೌಂಟ್‌ಗೆ 15 ಲಕ್ಷ ರೂಪಾಯಿ ಹಾಕುತ್ತೇವೆ ಎಂದಿದ್ದರು ಎಲ್ಲಿ ಹಾಕಿದ್ದಾರೆ? ಅಚ್ಛೇ ದಿನ್ ಯಾರಿಗಾದರೂ ಬಂದಿದೆಯೇ? ನಾವು ಕನಿಷ್ಠ ಪಕ್ಷ ಗೃಹಲಕ್ಷ್ಮಿ ಯೋಜನೆಯಡಿ 2,000 ರೂ., ಉಚಿತ ವಿದ್ಯುತ್, ಅಕ್ಕಿ ಮತ್ತು ಬಸ್ ಪ್ರಯಾಣದ ಮೂಲಕ ಜನರಿಗೆ ಸಹಾಯ ಮಾಡುತ್ತಿದ್ದೇವೆ. ಜನರ ಬಗ್ಗೆ ನೈಜ ಕಾಳಜಿ ಇದ್ದರೆ ಕೇಂದ್ರ ಸರ್ಕಾರ ಕೂಡ ಇಂತಹದೊಂದು ಯೋಜನೆ ರೂಪಿಸಲಿ. ಜನರ ಬ್ಯಾಂಕ್ ಖಾತೆಗಳಿಗೆ ತಿಂಗಳಿಗೆ ರೂ. 10,000 ಆರ್ಥಿಕ ನೆರವು ನೀಡಲಿ ಎಂದು ಸವಾಲು ಹಾಕಿದರು.

'ಬಿಜೆಪಿ ಖಾಲಿ ಮಾತುಗಳ ಮೂಲಕ ಜನರನ್ನು ಮರಳು ಮಾಡುತ್ತಿದೆ. ಅಕ್ಕಿಗೆ ಅರಿಶಿನ ಬೆರೆಸಿ ಅಯೋಧ್ಯೆಯಿಂದ ತಂದಿರುವಂತೆ ಬಿಂಬಿಸಿಕೊಂಡಿದೆ. ಅಕ್ಕಿ ಹಾಗೂ ಅರಿಶಿನ ಬೆರೆಸಿದ ವಿಡಿಯೊಗಳು ನಮ್ಮ ಬಳಿ ಇನ್ನೂ ಹಾಗೆ ಇವೆ. ಅಕ್ಷತೆಯನ್ನು ಮನೆ–ಮನೆಗೆ ತಲುಪಿಸಿದ ರೀತಿಯಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳು ಏಕೆ ಪೂರೈಸಬಾರದು?' ಎಂದು ವ್ಯಂಗ್ಯವಾಡಿದರು.

'ನನ್ನೊಬ್ಬನಿಂದ ಅಥವಾ ಸಿದ್ದರಾಮಯ್ಯ ಅವರೊಬ್ಬರಿಂದ ರಾಜ್ಯ ಸರ್ಕಾರ ನಡೆಯುತ್ತಿಲ್ಲ. ಇಬ್ಬರು ಒಟ್ಟಿಗೆ ಶ್ರಮಿಸಿ ಕಾಂಗ್ರೆಸ್ ಅಧಿಕಾರಕ್ಕೆ ತಂದಿದ್ದೇವೆ. ಉಪ ಚುನಾವಣೆಯಲ್ಲಿ ಕೂಡ ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದೇವೆ. ನಮ್ಮೊಂದಿಗೆ ಪಕ್ಷದ ಕಾರ್ಯಕರ್ತರು, ಶಾಸಕರು ಹಾಗೂ ಸಚಿವರೂ ಇದ್ದಾರೆ. ನಾವು ಜಾತಿ, ಧರ್ಮದ ಮೇಲೆ ರಾಜಕಾರಣ ಮಾಡುವುದಿಲ್ಲ. ನೀತಿಯ ಮೇಲೆ ರಾಜಕಾರಣ ಮಾಡುತ್ತೇವೆ' ಎಂದು ಇದೇ ವೇಳೆ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.

## LPG ಸಮಸ್ಯೆ ಉಲ್ಬಣ: ವಿದೇಶಾಂಗ ನೀತಿ ಬದಲಿಸಿ, ತಕ್ಷಣ ಕ್ರಮ ಕೈಗೊಳ್ಳಿ; ಕೇಂದ್ರಕ್ಕೆ ಮಲ್ಲಿಕಾರ್ಜುನ ಖರ್ಗೆ ಆಗ್ರಹ



ಬೆಂಗಳೂರು: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ಉಂಟಾಗಿರುವ ಎಲ್‌ಪಿಜಿ ಸಂಕಷ್ಟವನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ತಕ್ಷಣವೇ ವಿದೇಶಾಂಗ ನೀತಿಯಲ್ಲಿ ಬದಲಾವಣೆ ಮಾಡಿ ಇತರೆ ದೇಶಗಳಿಂದ ಅನಿಲ ಆಮದು ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಎಐಸಿಸಿ ಅಧ್ಯಕ್ಷ ಹಾಗೂ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಒತ್ತಾಯಿಸಿದ್ದಾರೆ.

ಶನಿವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, "ಗ್ಯಾಸ್ ಲಭ್ಯವಿಲ್ಲದಿದ್ದರೂ ಇದೆ ಎಂದು ಹೇಳುವುದು ಸರಿಯಲ್ಲ. ತಪ್ಪು ಇದ್ದರೆ ಅದನ್ನು ಸರಿಪಡಿಸಬೇಕು. ಇದು ಒಂದು ಗಂಭೀರ ಸಂಕಷ್ಟವಾಗಿದ್ದು, ಸರಿಯಾಗಿ ನಿರ್ವಹಿಸದಿದ್ದರೆ ದೇಶದ ಆರ್ಥಿಕತೆಗೆ ದೊಡ್ಡ ಹೊಡೆತ ಬೀಳುತ್ತದೆ" ಎಂದು ಎಚ್ಚರಿಸಿದರು.

ಈಗಾಗಲೇ ಗ್ಯಾಸ್ ಕೊರತೆಯಿಂದ ಸಣ್ಣ ಹೋಟೆಲ್‌ಗಳು ಮತ್ತು ಅನೇಕ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ. ಇದರಿಂದ ಸಾಮಾನ್ಯ ಜನರ ಜೀವನದ ಮೇಲೆ ನೇರ ಪರಿಣಾಮ ಬೀಳುತ್ತಿದೆ. ಮುಂದುವರಿದರೆ ಈ ಸಮಸ್ಯೆ ಮತ್ತಷ್ಟು ಗಂಭೀರವಾಗುವ ಸಾಧ್ಯತೆ ಇದೆ ಎಂದು ಕಳವಳ ವ್ಯಕ್ತಪಡಿಸಿದರು.

ಮಧ್ಯಪ್ರಾಚ್ಯ ಯುದ್ಧ ಇನ್ನೂ ಮುಂದುವರಿಯುವ ಸಾಧ್ಯತೆ ಇರುವುದರಿಂದ, ಎಲ್‌ಪಿಜಿ ಕೊರತೆ ಭವಿಷ್ಯದಲ್ಲಿ ದೊಡ್ಡ ಸಮಸ್ಯೆಯಾಗಬಹುದು. ಆದ್ದರಿಂದ ಈಗಲೇ ಇತರೆ ದೇಶಗಳೊಂದಿಗೆ ಮಾತುಕತೆ ನಡೆಸಿ, ಅನಿಲ ಖರೀದಿ ಮಾಡುವ ಹೊಸ ಮಾರ್ಗಗಳನ್ನು ಹುಡುಕಬೇಕು ಎಂದು ಸಲಹೆ ನೀಡಿದರು.

ಅದಕ್ಕಾಗಿಯೇ ನಿಯಮ 176 ರ ಅಡಿಯಲ್ಲಿ ಚರ್ಚಿಸಲು ಸಂಸತ್ತಿನಲ್ಲಿ ಪ್ರಶ್ನೆ ಕೇಳಲು ನಾನು ಸಮಯ ಕೋರಿದ್ದೆ. "ಇದು ದೇಶದ ಹಿತಾಸಕ್ತಿಗೆ ಸಂಬಂಧಿಸಿದ ವಿಷಯ. ಸಂಪೂರ್ಣ ಸದನದಲ್ಲಿ ಚರ್ಚೆ ನಡೆದರೆ ಎಲ್ಲರ ಅಭಿಪ್ರಾಯ ಸಿಗುತ್ತಿತ್ತು. ಆದರೆ, ಈ ನಿಯಮಕ್ಕೆ ಗೌರವ ನೀಡಲಾಗಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದೇ ವಿಷಯವನ್ನು ಅವರು ರಾಜ್ಯಸಭೆಯಲ್ಲಿ ಎರಡು ಬಾರಿ ಪ್ರಸ್ತಾಪಿಸಿದ್ದರೂ, ವಿರೋಧ ಪಕ್ಷದ ಸಂಸದರು ಬೆಂಬಲಿಸಿದರೂ ಕೇಂದ್ರ ಸರ್ಕಾರ ಸ್ಪಂದಿಸಲು ಸಿದ್ಧವಾಗಿಲ್ಲ ಎಂದು ಆರೋಪಿಸಿದರು.

## ರಾ.ಸೇ.ಯೋ ಶಿಬಿರ



**ಬೆಳಗಾವಿ ವಾರ್ತೆ ಲಕ್ಷ್ಮೇಶ್ವರ:** ಪಟ್ಟಣದ ತಾಯಿ ಪಾರ್ವತಿ ಮಕ್ಕಳ ಬಳಗದ ಕಲಾ ಹಾಗೂ ವಾಣಿಜ್ಯ ಮಹಿಳಾ ಮಹಾವಿದ್ಯಾಲಯದಿಂದ ರಾಷ್ಟ್ರೀಯ ಸೇವಾ ಯೋಜನೆಯ (ಎನ್ ಎಸ್ ಎಸ್ )ವಾರ್ಷಿಕ ಶಿಬಿರ ಸ್ಥಳ ಗುಲಗೊಂಜಿಕೊಪ್ಪದ ದುಂಡಿ ಬಸವೇಶ್ವರ ದೇವಸ್ಥಾನ ಆವರಣದಲ್ಲಿ ನಡೆಯಿತು

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಿಕ್ಷಕಿ ಮೈತ್ರಾದೇವಿ ಹಿರೇಮಠ ಎನ್ ಎಸ್ ಎಸ್ ಶಿಬಿರ ನಾಯಕತ್ವ ಗುಣ ಬೆಳೆಸುವಲ್ಲಿ ಸಹಾಯಕಾರಿಯಾಗಲಿದೆ, ವಿದ್ಯಾರ್ಥಿಗಳಿಗೆ ಶ್ರಮದ ಮಹತ್ವ ತಿಳಿಸುತ್ತದೆ, ಗ್ರಾಮೀಣ ಪ್ರದೇಶದ ಜನರ ಸಮಸ್ಯೆಗಳನ್ನು ಆಲಿಸಿ ಅವುಗಳನ್ನು ಪರಿಹರಿಸಲು ಎನ್‌ಎಸ್‌ಎಸ್ ಮುಖಾಂತರ ಪ್ರಯತ್ನಿಸಿ ಗ್ರಾಮೀಣ ಜನರಲ್ಲಿ ಆರೋಗ್ಯ ಮತ್ತು ಶುಚಿತ್ವದ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು.

ತಾಲೂಕ ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ನಿರ್ಮಲಾ ಅರಳಿ ಇನ್ನರ್ ವ್ಹಿಲ್ ಕ್ಲಬ್ ಸಂಸ್ಥಾಪಕ ಅಧ್ಯಕ್ಷೆ ಮಾಲಾ ದಂದರಗಿ ಮತ್ತು ಪತ್ರಕರ್ತ ಶಿವಲಿಂಗಯ್ಯ ಹೊತಗಿಮಠ ಮಾತನಾಡಿದರು.

ಕಾರ್ಯಕ್ರಮದಲ್ಲಿ ಗ್ರಾಪಂ ಮಾಜಿ ಉಪಾಧ್ಯಕ್ಷೆ ಸುಧಾ ಮಾದರ,ಪ್ರಾಚಾರ್ಯ ವಿಜಯಕುಮಾರ ಬಿಳಿಎಲೆ, ಎಸ್ ಎಸ್ ಎಸ್ ಘಟಕ ಅಧಿಕಾರಿ ಪರಮೇಶ ತಡಹಾಳ, ಶರಣಬಸವ ಅಣ್ಣಿಗೇರಿ, ರೆಂವಂತ ಕ್ಷತ್ರಿಯ, ಪ್ರಕಾಶ ಹರ್ಲಾಪುರ, ಉಪನ್ಯಾಸಕರಾದ ರವಿಕುಮಾರ ನೀರಲಗಿ ಸಂಗೀತಾ ಲಕ್ಕಣ್ಣವರ ಮಮತಾ ನಡುವಿನಮನಿ, ಮಾಲಾಶ್ರೀ ಹುರಳಿಕುಪ್ಪಿ ಶಭಾನಾ ಕಲಕುಟ್ರಿ ಉಪನ್ಯಾಸಕರು ಸಿಬ್ಬಂದಿಗಳು ಇದ್ದರು

ಮೇಘಾ ಸವಿತಾ ಹಣಗಿ ನಿವೇದಿತಾ ಹುಲಕೋಟಿ ಪ್ರತೀಕ್ಷಾ ಗೊಂದಕರ, ಪ್ರಗತಿ ಹುಬ್ಬಳ್ಳಿ ಕಾರ್ಯಕ್ರಮ ನಿರ್ವಹಿಸಿದರು.

## ಏಪ್ರಿಲ್ 12 ರಂದು ಪ್ರವೇಶ ಪರೀಕ್ಷೆ

ಗದಗ : ಗದಗ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಗದಗ, ರೋಣ ಮತ್ತು ಮುಂಡರಗಿ ತಾಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ ಹಾಗೂ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ 2026–27 ನೇ ಸಾಲಿಗೆ 6 ನೇ ತರಗತಿ ದಾಖಲಾತಿ ಪಡೆಯಲು ಪ್ರವೇಶ ಪರೀಕ್ಷೆ ದಿನಾಂಕ 12.04.2026 ರಂದು ಜರುಗಲಿದೆ.

ಅರ್ಜಿ ಸಲ್ಲಿಸಲು ನೋಂದಾಯಿಸಿದ ಪಾಲಕರ/ಪೋಷಕರ ದೂರವಾಣಿ ವಿದ್ಯಾರ್ಥಿಯ ಹೆಸರಿನೊಂದಿಗೆ ಪರೀಕ್ಷಾ ಕೇಂದ್ರದ ಮಾಹಿತಿಯನ್ನು ನಿರ್ದೇಶನಾಲಯ, ಬೆಂಗಳೂರು ರವರಿಂದ ಕಳುಹಿಸಲಾಗಿದೆ. ಸದರಿ ಪರೀಕ್ಷಾ ಪ್ರವೇಶ ಪತ್ರಗಳನ್ನು https://erp.dom.karnataka.gov.in/adm/Admission/StudentHallticket ಪಡೆದುಕೊಳ್ಳಬಹುದಾಗಿದೆ. ತಮಗೆ ನೀಡಿರುವ ಪರೀಕ್ಷಾ ಪ್ರವೇಶ ಪತ್ರಗಳಲ್ಲಿ ಸೂಚಿಸಿರುವ ಪರೀಕ್ಷಾ ಕೇಂದ್ರಕ್ಕೆ ಹಾಜರಿರಲು ಈ ಮೂಲಕ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಗದಗ ಇವರನ್ನು ಸಂಪರ್ಕಿಸಬಹುದಾಗಿದೆ.

## ಬಡ ವಿದ್ಯಾರ್ಥಿಗಳ ಉಚಿತ ಶಿಕ್ಷಣಕ್ಕೆ ಅಹಲ್ಯಾದೇವಿ ಹೋಳ್ಕರ್ ಸಂಸ್ಥೆ ಆಸರೆ: ಎಂ.ಎನ್. ಮದರಿ

### ಮುದ್ದೇಬಿಹಾಳದಲ್ಲಿ 'ಅಹಲ್ಯಾದೇವಿ ಹೋಳ್ಕರ್ ಅವಾರ್ಡ್ ಎಕ್ಸಾಮ್–2K26' ಪರೀಕ್ಷೆ: ವಿಜೇತರಿಗೆ ಸನ್ಮಾನ




**ಬೆಳಗಾವಿ ವಾರ್ತೆ ಮುದ್ದೇಬಿಹಾಳ:** ಕಡುಬಡ ಕುಟುಂಬದ ಹಾಗೂ ಬಿಪಿಎಲ್ ಕಾರ್ಡ್ ಹೊಂದಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವುದು ನಮ್ಮ ಸಂಸ್ಥೆಯ ಪ್ರಮುಖ ಉದ್ದೇಶವಾಗಿದೆ. 2017ರಿಂದಲೂ ಸತತವಾಗಿ ನಾವು ಈ ಅವಾರ್ಡ್ ಸಮಾರಂಭವನ್ನು ಆಯೋಜಿಸಿಕೊಂಡು ಬರುತ್ತಿದ್ದೇವೆ ಎಂದು ಅಹಲ್ಯಾದೇವಿ ಹೋಳ್ಕರ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಂ.ಎನ್. ಮದರಿ ಹೇಳಿದರು.

ಪಟ್ಟಣದ ಅಭ್ಯುದಯ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನ ಆಶ್ರಯದಲ್ಲಿ ಎಸ್‌ಎಸ್‌ಎಲ್‌ಸಿ, ಸಿಬಿಎಸ್‌ಇ ಹಾಗೂ ಐಸಿಎಸ್‌ಇ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ 'ಅಹಲ್ಯಾದೇವಿ ಹೋಳ್ಕರ್ ಅವಾರ್ಡ್ ಎಕ್ಸಾಮ್ 2ಏ26' ಬೃಹತ್ ಪ್ರತಿಭಾ ಪರೀಕ್ಷೆಯ ಸಮಾರೋಪ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

**ಭಾಷೆಯ ತೊಡಕು ನಿವಾರಣೆಗೆ ಒತ್ತು:** ವಿಜ್ಞಾನ ವಿಭಾಗದ ಉಪನ್ಯಾಸಕ ನಾಗರಾಜ ಎಸ್.ಎಂ. ಮಾತನಾಡಿ, "ಪಿಯುಸಿ ಹಂತದಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಭಾಷೆಯ ಅರ್ಥೈಸಿಕೊಳ್ಳುವಿಕೆ ದೊಡ್ಡ ಸವಾಲಾಗಿರುತ್ತದೆ. ಅಭ್ಯುದಯ ಕಾಲೇಜಿನಲ್ಲಿ ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಪರಿಣಾಮಕಾರಿ ಯಾಗಿ ಬೋಧಿಸುವ ಮೂಲಕ ವಿದ್ಯಾರ್ಥಿಗಳ ಈ ಸಮಸ್ಯೆಯನ್ನು ನೀಗಿಸಲಾಗುತ್ತಿದೆ. ಪೋಷಕರು ಮತ್ತು ವಿದ್ಯಾರ್ಥಿಗಳು ಈ ಆಧುನಿಕ ಶಿಕ್ಷಣ ತರಬೇತಿಯನ್ನು ಸದುಪಯೋಗ ಪಡಿಸಿಕೊಳ್ಳಬೇಕು," ಎಂದರು.

**700ಕ್ಕೂ ಹೆಚ್ಚು ವಿದ್ಯಾರ್ಥಿಗಳ ಭಾಗಿ – ರಿಯಾಯಿತಿ ಘೋಷಣೆ:** ಈ ಬಾರಿಯ ಅವಾರ್ಡ್ ಪರೀಕ್ಷೆಯಲ್ಲಿ ಒಟ್ಟು 700ಕ್ಕೂ ಹೆಚ್ಚು ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದರು. ಪರೀಕ್ಷೆಯಲ್ಲಿ ಪಾಲ್ಗೊಂಡ ಎಲ್ಲಾ ವಿದ್ಯಾರ್ಥಿಗಳಿಗೂ ಸಂಸ್ಥೆಯ ವತಿಯಿಂದ ಶಾಲಾ ಶುಲ್ಕದಲ್ಲಿ ವಿಶೇಷ ರಿಯಾಯಿತಿ ನೀಡುವುದಾಗಿ ಇದೇ ಸಂದರ್ಭದಲ್ಲಿ ಘೋಷಿಸಲಾಯಿತು.

**ವಿಜೇತ ವಿದ್ಯಾರ್ಥಿಗಳಿಗೆ ನಗದು ಬಹುಮಾನ:** ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಟಾಪ್ 16 ವಿದ್ಯಾರ್ಥಿಗಳನ್ನು ಗುರುತಿಸಿ ಸನ್ಮಾನಿಸಲಾಯಿತು. ಪ್ರಮುಖವಾಗಿ: ಪರೀಕ್ಷೆಯಲ್ಲಿ **ಪ್ರಥಮ ಸ್ಥಾನ:** ತನುಶ್ರೀ ವಾಲಿಕಾರ, ಮೈಮುನಾ ಮುದ್ನಾಳ, ಮತ್ತು ಗಂಗಮ್ಮ ಕೋಳೂರ, **ದ್ವಿತೀಯ ಸ್ಥಾನ:** ಚಂದ್ರು ಛಲವಾದಿ, **ತೃತೀಯ ಸ್ಥಾನ:** ಶ್ರೀನಿವಾಸ್ ಕಟ್ಟಿಮನಿ ಮತ್ತು ಸಮರ್ಥ ಬಾಗೇವಾಡಿ,ವಿಜೇತರಿಗೆ ಸಂಸ್ಥೆಯ ವತಿಯಿಂದ ಸನ್ಮಾನದೊಂದಿಗೆ ನಗದು ಬಹುಮಾನ ಹಾಗೂ ಸ್ಕಾಲರ್‌ಶಿಪ್ ವಿತರಿಸಲಾಯಿತು.

ಕಾರ್ಯಕ್ರಮದ ವೇದಿಕೆಯಲ್ಲಿ ಸಂಸ್ಥೆಯ ನಿರ್ದೇಶಕಿ ಶ್ರೀಮತಿ ಶ್ರೀದೇವಿ ಮದರಿ, ಕಿರಣ ಮದರಿ,ಲೆಕ್ಕಾಧಿಕಾರಿ ಬಸವರಾಜ ಬಿಜ್ಜೂರ, ಆಡಳಿತಾಧಿಕಾರಿ ಗೀತಾ ಹುರಕಡ್ಲಿ, ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಗುಡದಪ್ಪ ಕಮರಿ,ರವಿ ಜಗಲಿ,ಕಾಲೇಜಿನ ಪ್ರಾಚಾರ್ಯ ಮಧುಚಂದ್ರ ದನ್ನೂರ, ಮುಖ್ಯಗುರುಗಳಾದ ರಮೇಶ ಹರನಾಳ,ಪ್ರಶಾಂತ ಬಿರಾದಾರ,ಬಿ.ಕೆ. ಪೂಜಾರಿ, ಬಾಲು ಕರೆಕಲ್, ಬಸವರಾಜ ಗುಡ್ಲಮನಿ, ಚಂದ್ರು ಜೋಗಿನ, ಸೇರಿದಂತೆ ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

## ಅಥಣಿ–ಬೆಂಗಳೂರು ಪಲ್ಲಕ್ಕಿ ಬಸ್ ಸೇವೆಗೆ ಚಾಲನೆ




**ಬೆಳಗಾವಿ ವಾರ್ತೆ ಅಥಣಿ:** ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ (ಎನ್ ಡಬ್ಲ್ಯೂಕೆಆರ್‌ಟಿಸಿ) ಚಿಕ್ಕೋಡಿ ವಿಭಾಗದ ಅಥಣಿ ಘಟಕದಿಂದ ಅಥಣಿ–ಬೆಂಗಳೂರು ಮಾರ್ಗದ ನೂತನ ಪಲ್ಲಕ್ಕಿ ನಾನ್ ಎಸಿ ಸ್ಲೀಪರ್ (ಹವಾನಿಯಂತ್ರಣ ರಹಿತ ಸ್ಲೀಪರ್) 2 ಬಸ್‌ಗಳಿಗೆ ಮಾಜಿ ಉಪಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಅವರು ರವಿವಾರ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ಈ ವೇಳೆ ಶಾಸಕ ಲಕ್ಷ್ಮಣ ಸವದಿ ಮಾತನಾಡಿ ನಮ್ಮ ರಾಜ್ಯದ ಸಾರಿಗೆ ಸೇವೆ ಇಡೀ ದೇಶದಲ್ಲಿಯೇ ಮಾದರಿಯಾಗಿದ್ದು ಅಥಣಿ ಜನತೆಯ ಬಹು ದಿನಗಳ ಬೇಡಿಕೆಯಂತೆ ಅಥಣಿಯಿಂದ ಬೆಂಗಳೂರು ನಡುವಿನ ಸಂಪರ್ಕ ಬಲಪಡಿಸುವ ನಿಟ್ಟಿನಲ್ಲಿ ಹಾಗೂ ಸಾರ್ವಜನಿಕರಿಗೆ ಸುಕ್ಷೇಮ ಅತ್ಯಾಧುನಿಕ ಸಾರಿಗೆ ಸೌಲಭ್ಯ ಒದಗಿಸುವ ಸಂಕಲ್ಪದೊಂದಿಗೆ ಈ ಬಸ್ ಸೇವೆ ಆರಂಭಿಸಲಾಗಿದೆ. ಈ ಭಾಗದ ವ್ಯಾಪಾರಸ್ಥರು. ಉದ್ಯೋಗಿಗಳು. ಸಾರ್ವಜನಿಕರು ಮತ್ತು ಪ್ರವಾಸಿಗರಿಗೆ ಈ ಬಸ್ ಸೇವೆಗಳು ಅತ್ಯಂತ ಸುರಕ್ಷಿತ ಹಾಗೂ ಅರಾಮದಾಯಕ ಪ್ರಯಾಣದ ಅನುಭವವನ್ನು ನೀಡಲಿದ್ದು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ರಾಜ್ಯದ ಕಾಂಗ್ರೆಸ್ ಸರ್ಕಾರವು ಜನಸೇವೆಯೇ ಜನಾರ್ದನ ಸೇವೆ ಎಂಬಂತೆ ಇನ್ನೂ ಹತ್ತು ಹಲವಾರು ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದ್ದು ಮುಂದಿನ ದಿನಮಾನದಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಬಸ್ ಗಳನ್ನು ಅಥಣಿ ಘಟಕಕ್ಕೆ ತರಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದರು

ಈ ಸಂದರ್ಭದಲ್ಲಿ ಪಂಚ ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಸಿದ್ದಾರ್ಥ ಸಿಂಗೆ. ಚಿಕ್ಕೋಡಿ ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ ಎಮ್ ಆರ್ ಮುಂಜೆ. ಡಿಎಂಇ ಎ ಎಸ್ ಅಡಹಳ್ಳಿಮಠ. ಡೀಪೂ ಮ್ಯಾನೇಜರ್ ನಿಜಗುಣ ಕೇರಿ. ಎಟಿಎಸ್. ಬಿ ಬಿ ಜಗದಾಳ. ಟಿ ಐ ಕಂಕಣವಾಡಿ. ಕೆಎಸ್ ಟಿ ಹವಾಲ್ದಾರ ಎ ಎಸ್ ಚಿಂಚಲಿ. ಮುಖಂಡರಾದ ಮಂಜು ಹೋಳಿಕಟ್ಟಿ ಸೇರಿದಂತೆ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಸ್ಪಂದನೆ ಅಗತ್ಯ



**ಬೆಳಗಾವಿ ವಾರ್ತೆ ಚನ್ನಮ್ಮನ ಕಿತ್ತೂರು:** ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಸ್ಪಂದನೆ ಅಗತ್ಯ. ರಾಷ್ಟ್ರೀಯ ಸೇವಾ ಯೋಜನೆ. ಸಾಮಾಜಿಕ ಕಳಕಳಿ ಬೆಳೆಸುವುದು ಮೂಲ ಉದ್ದೇಶವೆಂದು ಕಿನಾವಿವ ಸಂಘದ ಮಾಜಿ ಚೇರಮನ್ ಹಾಗೂ ನಿರ್ದೇಶಕ ಜಗದೀಶ ವಸ್ತ್ರದ ಹೇಳಿದರು.

ತಾಲೂಕಿನ ಬೈಲೂರ ನಿಷ್ಕಲ ಮಂಟಪದಲ್ಲಿ ನಡೆಯುತ್ತಿರುವ ಕಿನಾವಿವ ಸಂಘ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ. ಇಂದಿನ ತಂತ್ರಜ್ಞಾನ ಯುಗದಲ್ಲಿ ಜನರು ಸಾಮಾಜಿಕ ಸ್ಪಂದನೆಯನ್ನು ಕಳೆದುಕೊಂಡಿದ್ದು ಕೇವಲ ಸ್ವಾರ್ಥಿ ಜೀವನವನ್ನು ನಡೆಸುತ್ತಿದ್ದಾರೆ, ಸಮಾಜದಲ್ಲಿ ಸಂಬಂಧಗಳು ಕಳಚಿದ ಕೊಂಡಿಗಳಾಗಿವೆ. ಇದರಿಂದ ನಮ್ಮ ಸಮಾಜದ ಮೇಲೆ ಸಾಕಷ್ಟು ದುಷ್ಪರಿಣಾಮ ಉಂಟಾಗಿದ್ದು ಇದನ್ನು ತಡೆಗಟ್ಟಲು ಸಾಮಾಜಿಕ ಪಿಡುಗುಗಳನ್ನು ಮುಕ್ತಗೊಳಿಸಲು ಸ್ಪಂದಿಸುವಂತೆ ಯುವಕರನ್ನು ಬೆಳೆಸಬೇಕಾಗಿದೆ. ಯುವಕರನ್ನು ರಾಷ್ಟ್ರದ ಅಭಿವೃದ್ಧಿಯಲ್ಲಿ ತೊಡಗಿಸುವುದು ನಮ್ಮೆಲ್ಲರ ಮೂಲ ಕರ್ತವ್ಯವಾಗಿದೆ ಅದಕ್ಕಾಗಿ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿಗಳನ್ನು ನೀಡುವುದರ ಮೂಲಕ ಅವರಲ್ಲಿ ಸಮಾಜದ ಅರಿವು ಮೂಡಿಸುವುದು ಎಲ್ಲ ವರ್ಗದ ಜನರೊಂದಿಗೆ ಸಾಮರಸ್ಯದಿಂದ ಬಾಳುವಂತೆ ಬೆಳೆಸಬೇಕಾಗಿದೆ ಎಂದರು..

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಿನಾವಿವ ಸಂಘದ ಚೇರಮನ್ನ ಶಂಕರ ವಳಸಂಗ ರಾ.ಸೇ.ಯೋ ದ ವಿಶೇಷ ಶಿಬಿರದಲ್ಲಿ ವಿದ್ಯಾರ್ಥಿಗಳು ಅನೇಕ ಸಾಮಾಜಿಕ ಕಾರ್ಯಗಳನ್ನು ಕೈಗೊಂಡು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಂತಾಗಬೇಕು ಹಾಗೂ ಸಮಾಜಕ್ಕೆ ಒಬ್ಬ ಉತ್ತಮ ಜವಾಬ್ದಾರಿಯುತ ನಾಗರೀಕನಾಗಬೇಕು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶಿಬಿರಾಧಿಕಾರಿ ಡಾ. ಹೊನ್ನರಾಜು ಎಸ್.ವಿ ದತ್ತು ಗ್ರಾಮ ಬೈಲೂರಲ್ಲಿ ನಡೆಯುತ್ತಿರುವ ವಾರ್ಷಿಕ ವಿಶೇಷ ಶಿಬಿರದಲ್ಲಿ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ, ನಾಯಕತ್ವ ಗುಣ ವೃದ್ಧಿಸಿಕೊಳ್ಳುವ ಹಾಗೂ ಸಮಾಜದ ಅಭಿವೃದ್ಧಿಗೋಸ್ಕರ ಅನೇಕ ವಿಶೇಷ ಕಾರ್ಯಕ್ರಮಗಳನ್ನು, ಉಪನ್ಯಾಸಗಳನ್ನು ಹಾಗೂ ಆರೋಗ್ಯ ರಕ್ಷಣೆ ಹಾಗೂ ಸಾಂಕ್ರಾಮಿಕ ರೋಗಗಳ ಕುರಿತು ಅರಿವುಮೂಡಿಸುವುದು ಹಾಗೂ ನಾಗರೀಕರ ಆರೋಗ್ಯ ತಪಾಸಣಾ ಶಿಬಿರಗಳನ್ನು ಹಮ್ಮಿಕೊಂಡಿದ್ದು ಇದರ ಸದುಪಯೋಗ ಗ್ರಾಮಸ್ಥರು ಪಡೆಯಬೇಕೆಂದರು.

ಶ್ರೀ ಚನ್ನಬಸವೇಶ್ವರ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಶಂಕರ ಪತ್ತಾರ ಸಸಿಗೆ ನೀರರೆಯುವ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ಶಂಕರಗೌಡ ಪಾಟೀಲ, ಮಯೂರ ಗಿರಿಯಾಲ, ಬಸವರಾಜ ಲದ್ದೀಮಠ, ಬಸವರಾಜ ಬೀಡಿ, ಕಿನಾವಿವ ಸಂಘದ ವಾಯಿಸ್ ಚೇರಮನ್ನ ಜಗದೀಶ ಘಟ್ನಟ್ಟಿ, ಗೌರವ ಕಾರ್ಯದರ್ಶಿ ಜಗದೀಶ ಬಿಕ್ಕಣ್ಣವರ ಇತರರಿದ್ದರು.

ಸ್ವಾಗತ ಪ್ರಾಚಾರ್ಯ ನಾಗರಾಜ ಎಚ್ .ಕೆ, ಮೇಘಾ ಸಂಗಡಿಗರು ಪ್ರಾರ್ಥನೆ ಹಾಗೂ ರಾ.ಸೇ.ಯೋ ಗೀತೆಯನ್ನು ಹಾಡಿದರು, ಡಾ. ಸಂಗೀತಾ ತೋಲಗಿ ವಂದಿಸಿದರು.

# ಬೆಂಕಿ: ಬಣವೆ ಭಸ್ಮ



**ಬೆಳಗಾವಿ ವಾರ್ತೆ ನವಲಗುಂದ:** ಪಟ್ಟಣದ ನೀಲಮ್ಮನ ಜಲಾಶಯ ಬಳಿ ಇರುವ ಮೇವು ಹಾಗೂ ಹೊಟ್ಟಿನ ಬಣವಿ ಸುಟ್ಟು ಕರಕಲಾದ ಘಟನೆ ಭಾನುವಾರ ರಾತ್ರಿ ನಡೆದಿದೆ.

ಸ್ಥಳೀಯ ಸಿದ್ದಾಪುರ ಓಣಿಯ ನಿವಾಸಿ ಪಕ್ಕೀರಪ್ಪ ಗುರಪ್ಪ ಗಡ್ಡಿಯವರು ನೀಲಮ್ಮನ ಜಲಾಶಯದ ಬದುವಿನಲ್ಲಿರುವ ಬಣವಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದಾರೆ. ಪರಿಣಾಮ ಆರು ಟ್ರೆಲರ್‌ಗಳಷ್ಟು ಮೇವು ಹಾಗೂ ಹೊಟ್ಟಿನ ಬಣವವಿ ಸಂಪೂರ್ಣ ಸುಟ್ಟು ಕರಕಲಾಗಿದೆ.

ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಸ್ಥಳೀಯರ ಸಹಾಯದಿಂದ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾದರು.

ಮಾಜಿ ಪುರಸಭಾ ಸದಸ್ಯ ಶಂಕ್ರಪ್ಪ ತೋಟದ ಮಾತನಾಡಿ, 'ಜಾನುವಾರುಗಳಿಗೆ ಸಂಗ್ರಹಿಸಿಟ್ಟಿದ್ದ ಬಡ ರೈತನ ಜೋಳದ ಬಣವೆ ಸಂಪೂರ್ಣವಾಗಿ ಸುಟ್ಟು ಹೋಗಿರುವುದು ದುಃಖಕರ ಸಂಗತಿ. ಸರ್ಕಾರವು ಶೀಘ್ರವೇ ಸೂಕ್ತ ಪರಿಹಾರವನ್ನು ನೀಡಬೇಕು' ಎಂದು ಆಗ್ರಹಿಸಿದರು.

ಕಂದಾಯ ಇಲಾಖೆಯ ಗ್ರಾಮ ಲೆಕ್ಕಾಧಿಕಾರಿ ಮುತ್ತು ಚಿಕ್ಕನರಗುಂದ ಅವರು ಸ್ಥಳಕ್ಕೆ ಭೇಟಿ ನೀಡಿ ತಹಶೀಲ್ದಾರ ಸುಧೀರ ಸಾಹುಕಾರ ಅವರ ಗಮನಕ್ಕೆ ತರುವುದಾಗಿ ತಿಳಿಸಿದ್ದಾರೆ.

# ಡಾ. ಬಾಬು ಜಗಜೀವನ ರಾಮ್‌ರವರ 119ನೇ ಜನ್ಮ ದಿನಾಚರಣೆ

**ಬೆಳಗಾವಿ ವಾರ್ತೆ ಚನ್ನಮ್ಮನ ಕಿತ್ತೂರು:** ಸ್ಥಳೀಯ ತಹಶೀಲ್ದಾರ ಕಛೇರಿ ಸಭಾಭವನದಲ್ಲಿ ಸಮಾಜ ಕಲ್ಯಾಣ ಇಲಾಖೆ, ತಾಲೂಕಾ ಡಳಿತ, ತಾಪಂ, ಪಪಂ ಹಾಗೂ ಪಪಂ ಎಂಕೆಹುಬ್ಬಳ್ಳಿ ಇವರುಗಳ ಸಂಯುಕ್ತಾಶ್ರಯದಲ್ಲಿ ಹಸಿರು ಕ್ರಾಂತಿ ಹರಿಕಾರ ಭಾರತ ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ ರಾಮ್‌ರವರ 119ನೇ ಜನ್ಮ ದಿನಾಚರಣೆಯನ್ನು ಸಡಗರ ಸಂಭ್ರಮ ಅದ್ದೂರಿಯಿಂದ ಆಚರಿಸಲಾಯಿತು.



ತಹಶೀಲ್ದಾರ ಕಲ್ಲನಗೌಡ ಪಾಟೀಲ ಹಾಗೂ ಸಮಾಜ ಬಾಂಧವರು ಜಗಜೀವನ ರಾಮ್‌ರವರ ಭಾವಚಿತ್ರಕ್ಕೆ ಪುಷ್ಪಾರ್ಪನೆ ಮಾಡಿ ದೀಪ ಬೆಳಗಿಸಿದರು. ಕಾರ್ಯಕ್ರಮದಲ್ಲಿ ಪ್ರಭಾರಿ ವಿಶೇಷ ತಹಶೀಲ್ದಾರ ಪ್ರಕಾಶ ಕೋರೆ, ಎಸಿಡಿಪಿಓ ಶ್ರೀದೇವಿ ಕುಂತೋಜಿ, ಪಿಡಬ್ಲೂಡಿ ಎಇಇ ಸಂಜೀವ ಮಿರಜಕರ, ಕ್ಯೂರೇಟರ್ ರಾಘವೇಂದ್ರ, ಆರ್‌ಆಯ್. ಎಂ.ಡಿ ಹಿರೇಮಠ, ಪ್ರಭಾರಿ ಪುಡ್ ತಹಶೀಲ್ದಾರ ವಸಂತ ಅರಸಿಂಕರ, ಮಂಜುನಾಥ ತೊಟಗಿ, ಎಂ.ಎಸ್.ಪಾಟೀಲ, ಲಕ್ಷ್ಮೀಬಾಯಿ ಲಮಾಣಿ, ರೂಪಾ ಜ್ಯೋತಿ, ಪಿ.ವೈ. ಕನಬೂರ, ಶ್ರೀಕಾಂತ ಶೀಗಿಹಳ್ಳಿ, ರಾಜು ಜಾಗಂಟಿ, ಮಂಜುನಾಥ ಮಣ್ಣವಡ್ಡರ, ಸುರೇಶ ಜಾಗಂಟಿ, ಸುಬಾಸ್, ಸಿದ್ದು, ಸೇರಿ ದಂತೆ ತಾಲೂಕ ಮಟದಟ ಎಲ್ಲ ಅಧಿಕಾರಿಗಳು ಸಮಾಜದ ಮುಖಂ ಡರು, ತಹಶೀಲ್ದಾರ ಹಾಗೂ ಸಮಾಜ ಕಲ್ಯಾಣ ಸಿಬ್ಬಂದಿ ಇತರರಿದ್ದರು.

# ಬಾಬು ಜಗಜೀವನರಾಮ್ ಜಯಂತಿ ಆಚರಣೆ



**ಬೆಳಗಾವಿ ವಾರ್ತೆ ನವಲಗುಂದ:** ತಹಶೀಲ್ದಾರ ಕಚೇರಿ ಸಭಾಂಗಣದಲ್ಲಿ ಬಾಬು ಜಗಜೀವನರಾಮ್ ರವರ 119 ನೇ ಜಯಂತಿ ಅಂಗವಾಗಿ ಅವರ ಭಾವಚಿತ್ರಕ್ಕೆ ತಹಶೀಲ್ದಾರ ಸುಧೀರ ಸಾಹುಕಾರ ಪುಷ್ಪ ಸಲ್ಲಿಸುವ ಮೂಲಕ ತಾಲ್ಲೂಕು ಆಡಳಿತದಿಂದ ಜಯಂತಿ ಆಚರಿಸಲಾಯಿತು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಶೋಭಾ ಹಿರೇಮಠ, ಉಪ ತಹಶೀಲ್ದಾರ ಗಣೇಶ್ ಚಳ್ಳಕೇರಿ, ಡಾ. ಮಾನೋಹರ್ ದ್ಯಾಬೇರಿ, ಪುರಸಭೆ ಮುಖ್ಯಾಧಿಕಾರಿ ಎಸ್ ಪಿ ಪೂಜಾರ್, ಸಮಾಜ ಮುಖಂಡರು,ಶಿವು ಪೂಜಾರ್, ಸಂಗಪ್ಪ ಮಾದರ, ದ್ಯಾಮಣ್ಣ ಹೊನಕುದರಿ, ನಾಗಲಿಂಗಪ್ಪ ದೊಡಮನಿ, ಕುಮಾರ ಮಾದರ,ರಾಜು ದೊಡಮನಿ, ಅಶೋಕ ಮದಗುಣಕಿ,ರಾಜು ದೊಡಮನಿ, ನಿಂಗಪ್ಪ ಕೆಳಗೇರಿ, ಶಿವಪುತ್ರಪ್ಪ ಕೆಳಗೇರಿ, ಮೈಲಾರಪ್ಪ ವೈದ್ಯ, ಲಕ್ಷ್ಮಿ ಹೊಸಮನಿ, ರವಿ ಬೆಂಡಿಗೇರಿ, ಹಣಮಂತಪ್ಪ ಕೆಳಗೇರಿ, ಕೃಷ್ಣ ಮಾದರ, ಎಕ್ಕಿರಪ್ಪ ನಾಗಣ್ಣವರ, ಶಿವಾನಂದ ಛಲವಾದಿ, ದೀಲಿಪ್ ರತ್ನಾಕರ, ಬಸವರಾಜ ಕಾತರಕಿ ಸೇರಿ ತಾಲ್ಲೂಕು ಮಟ್ಟದ ಅಧಿಕಾರಿಗಳು ಸಮಾಜ ಮುಖಂಡರು ಉಪಸ್ಥಿತರಿದ್ದರು.

# ರಕ್ತದಾನದ ಮಹತ್ವ: ಜಾಗೃತಿ ಕಾರ್ಯಕ್ರಮ



**ಬೆಳಗಾವಿ ವಾರ್ತೆ ಬಾದಾಮಿ:** ಪಟ್ಟಣದ ಶ್ರೀ ವೀರಪುಲಿಕೇಶಿ ವಿದ್ಯಾವರ್ಧಕ ಸಂಸ್ಥೆಯ ಶ್ರೀ ಎಸ್.ಬಿ.ಮಮದಾಪೂರ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯದ ವತಿಯಿಂದ ರಾಷ್ಟ್ರೀಯ ಸೇವಾ ಯೋಜನೆಯ ಘಟಕದ ಸಹಯೋಗದಲ್ಲಿ 2025–26 ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರವನ್ನು ದತ್ತು ಗ್ರಾಮ ಕೆಂದೂರ ದಲ್ಲಿ ಎರಡನೇಯ ದಿನ ಜಿಲ್ಲಾ ರಕ್ತ ಭಂಡಾರ ಘಟಕದ ವೈದ್ಯಾಧಿಕಾರಿ ಪಾಂಡುರಂಗ ದೊಡ್ಡಮನಿ ಮಾತನಾಡಿ ರಕ್ತದಾನದ ಮಹತ್ವವನ್ನು ತಿಳಿಸಿದರು.

ಎನ್.ಎಸ್.ಎಸ್.ಕಾರ್ಯಕ್ರಮಧಿಕಾರಿ ಬಸವರಾಜ್ ಕಟ್ಟಿಮನಿ ಹಾಗೂ ಜಿಲ್ಲಾ ರಕ್ತ ಭಂಡಾರದ ಆಪ್ತ ಸಮಾಲೋಚಕರಾದ ಶ್ರೀಪಾದ ಮಾಳಗಿ ಹಾಗೂ ದುರ್ಗೇಶ್ ಭೋವಿ ಉಪಸ್ಥಿತರಿದ್ದರು. ದಾವಣಗೆರೆಯ ಶತಕಗಳ ಸರದಾರ ಕರ್ನಾಟಕದ ಬ್ಲಡ್ ಮ್ಯಾನ್ ಎಂದೇ ಖ್ಯಾತಿ ಪಡೆದ ಶಿವಕುಮಾರ್ ಮಹಡಿಮನಿ ಇವರು 106 ಬಾರಿ ರಕ್ತದಾನ ಮಾಡಿ ಜೀವನವನ್ನೆ ಮುಡಿಪಾಗಿಟ್ಟಿದ್ದಾರೆ. ಎನ್.ಎಸ್.ಎಸ್ ಸ್ವಯಂಸೇವಕರು ಒಟ್ಟು 18 ಯೂನಿಟ್ ನೀಡಿದರು.



ಜಿ.ಪಂ.ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಅವರು ಪರೀಕ್ಷೆಯ ಕೊನೆಯ ದಿನ ಬಾದಾಮಿ ಹಾಗೂ ಗುಳೇದಗುಡ್ಡದ ತಾಲೂಕಿನ ಎಸ್.ಎಸ್.ಎಲ್.ಸಿ. ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಈ ಸಂದರ್ಭದಲ್ಲಿ ತಾ.ಪಂ.ಇಒ ಸತೀಶ ಮಾಕೊಂಡ, ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ವಾಮನ ಪೆಟ್ಲೂರ, ನೋಡಲ್ ಅಧಿಕಾರಿ ಬಿ.ಕೆ.ಚಿಮಲ್, ಪರೀಕ್ಷಾ ಕೇಂದ್ರದ ಅಧೀಕ್ಷಕರು ಹಾಜರಿದ್ದರು.

# ಉಪ ಚುನಾವಣೆಯಲ್ಲಿ ವೀರಣ್ಣ ಚರಂತಿಮಠ ಅಧಿಕ ಮತಗಳ ಅಂತರದಿಂದ ಗೆಲ್ಲಿಸಬೇಕು: ಬಿ.ಎಸ್.ಯಡಿಯೂರಪ್ಪ



**ಬೆಳಗಾವಿ ವಾರ್ತೆ ಬಾಗಲಕೋಟೆ:** ಬಂಜಾರ ಸಮಾಜದ ಸಮಗ್ರ ಅಭಿವೃದ್ಧಿಗೆ ಮತ್ತು ಪ್ರಗತಿಗೆ ಬಿಜೆಪಿ ಪಕ್ಷವು ನಮ್ಮ ಜೊತೆಯಲ್ಲಿ ಇರುತ್ತದೆ. ಇದರಲ್ಲಿ ಯಾವುದೇ ಅನುಮಾನ ಬೇಡಾ. ಈ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅಧಿಕ ಮತಗಳ ಅಂತರದಿಂದ ಗೆಲ್ಲಿಸಬೇಕೆಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮನವಿ ಮಾಡಿದರು.

ಬಾಗಲಕೋಟೆ ನವನಗರದಲ್ಲಿ ಭಾನುವಾರ ಬಾಗಲಕೋಟೆ ಮತಕ್ಷೇತ್ರದ ಬಂಜಾರ ಸಮಾಜ ಮುಂಖಡರ ಸಭೆಯಲ್ಲಿ ಉಪ ಚುನಾವಣೆಯ ಬಿಜೆಪಿ ಅಭ್ಯರ್ಥಿ ವೀರಣ್ಣ ಚಂರತಿಮಠ ಪರವಾಗಿ ಮತ ಯಾಚಿಸಿ ಅವರು ಮಾತನಾಡಿದರು. ಹಿಂದಿನ ಬಿಜೆಪಿ ಸರ್ಕಾರ ಅವಧಿಯಲ್ಲಿ ಬಂಜಾರ, ಭೋವಿ, ಕೊಂಚ, ಕೊರಂ ಜಾತಿಗಳಿಗೆ ಸೇರಿಸಿ 4.5 ಮೀಸಲಾತಿ ಕಲ್ಪಿಸಿತ್ತು. ಆದರೆ ಕಾಂಗ್ರೆಸ್ ಪಕ್ಷದ ಸಿದ್ಧರಾಮಯ್ಯ ಸರ್ಕಾರ ಮೀಸಲಾತಿ ದೊರಲಿಸುವಲ್ಲಿ ಅನ್ಯಾಯ ಮಾಡಿದೆ. ಈ ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ಕಿತ್ತೋಗೆದು ಮತ್ತೋಮ್ಮೆ ಬರುವಂತ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ತರಬೇಕು ಬಂಜಾರ ಸಮಾಜ ಅಭಿವೃದ್ದಿಯಾಗಬೇಕು. ಇದಕ್ಕಾಗಿ ನಾವುಗಳು ನಿಮ್ಮ ಹತ್ತಿರ ಬಂದಿದ್ದೇವೆ ಬಂದುಗಳೆ. ಬಾಗಲಕೋಟೆ ಉಪ ಚುನವಣೆಯಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿ ವೀರಣ್ಣ ಚರಂತಿಮಠ ರವರಿಗೆ ಶೇ 90ರಷ್ಟು ಮತಗಳನ್ನು ನೀಡಿ ವಿಧಾನ ಸಭೆಗೆ ಕಳಿಸಿದಾಗ ಮಾತ್ರ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಿದಂತ್ತಾಗುತ್ತದೆ. ಸಿದ್ದರಾಮಯ್ಯ ಎಂದರೆ ನಂಬಿಕೆ ದ್ರೋಹ ಮತ್ತು ವಿಶ್ವಾಸ ದ್ರೋಹಕ್ಕೆ ಮತ್ತೊಂದು ಹೆಸರೆ ಸಿದ್ದರಾಮಯ್ಯ. ಈ ಚುನವಣೆಯಲ್ಲಿ ಯಾವ ಮುಖವನ್ನು ಇಟ್ಟುಕೊಂಡು ಓಟು ಕೇಳುತ್ತಾರೆ. ಅವರು ಎರಡುವರೇ ಮುಕ್ಕಾಲು ವರ್ಷದ ಅವಧಿಯಲ್ಲಿ ಯಾವುದಾರೂ ಅಭಿವೃದ್ದಿ ಕೆಲಸ ಮಾಡಿದ್ದೇವೆ ಎಂದು ತೋರಿಸಲಿ ನೋಡೊಣ. ಅವರ ಜಾತಿಯವರು ಈ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದಾರೆ. ಆದರೆ ಎಲ್ಲ ಮಂತ್ರಿಗಳು ಇಲ್ಲಿಯೇ ಬಂದು ಕುಳಿತಿದ್ದಾರೆ ನೋಡಿ. ದುಡ್ಡಿನ ಹಣ ಬಲ, ಅಧಿಕಾರದ ಬಲ, ತೋಳ ಬಲದಿಂದ ಜಾತಿಯ ವಿಷ ಬೀಜವನ್ನು ಬಿತ್ತಿ ಚನಾವಣೆವನ್ನು ಗೆಲ್ಲಕೆಂಬ ಭ್ರಮೆಯಲ್ಲಿ ಸಿದ್ದರಾಮಯ್ಯನವರು ಇದ್ದಾರೆ. ಆದರೆ ಧಾವಣಗೇರಿಯಲ್ಲಿ ಈಗಾಗಲೇ ಸೋತಿದ್ದಾರೆ. ಬಾಗಲಕೋಟೆಯಲ್ಲಿ ನಮ್ಮ ಅಭ್ಯರ್ಥಿ ವೀರಣ್ಣ ಚಂರತಿಮಠ ನೂರಕ್ಕೆ ನೂರಷ್ಟು ಗೆಲ್ಲಲಿದ್ದಾರೆ ಎಂದರು.

ಈ ಚುನಾವಣೆ ಯಡಿಯೂರಪ್ಪಂದಲ್ಲ ಬಂಜಾರ ಸಮಾಜದ ಮುಂದಿನ ಭವಿಷ್ಯವನ್ನು ನಿರ್ಮಾಣ ಮಾಡುವ ಚುನಾವಣೆ ಇದಾಗಿದೆ. ಎಲ್ಲರೂ ಅರ್ಥ ಮಾಡಿಕೊಂಡು ಒಂದಾಗಿ ಒಗ್ಗಟಾಗಿ ಎಪ್ರೀಲ್ 09 ರಂದು ಬಿಜೆಪಿಗೆ ಮತ ನೀಡಿ ಆರ್ಶೀವಾದ ಮಾಡಬೇಕು. ಅವರ ದುಡ್ಡಿನ ಆಸೆಗೆ ಬಲಿಯಾಗಬೇಡಿ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನಾಗಿ ಮಾಡಿದ ನಮ್ಮ ಅಭ್ಯರ್ಥಿ ವೀರಣ್ಣ ಚರಂತಿಮಠ ರವರಿಗೆ 100ಕ್ಕೆ 90ರಷ್ಟು ಮತಗಳನ್ನು ನೀಡಿ ಗೆಲ್ಲಿಸಿಬೇಕು ಎಂದು ಸಮಾಜ ಬಾಂಧವರಲ್ಲಿ ಮನವಿ ಮಾಡಿದರು.

ಕೇಂದ್ರ ಮಂತ್ರಿ ಪ್ರಲ್ಹಾದ ಜ್ಯೋಶಿ ಮಾತನಾಡಿ, ಕೇಂದ್ರ ಸರ್ಕಾರ ಮೀಸಲಾತಿಯನ್ನು ತಗೆದು ಹಾಕಲಿದ್ದಾರೆ ಎಂದು ಬಹಳ ಸಲ ಕಾಂಗ್ರೇಸಿಗರು ಅಪಪ್ರಚಾರ ಮಾಡುತ್ತಿದ್ದರೆ. ಆದರೆ ಬಿಜೆಪಿ ಸರ್ಕಾರ ಮೀಸಲಾತಿ ವಿಚಾರದಲ್ಲಿ ಯಾವುದೇ ರೀತಿಯಲ್ಲಿ ಕೈ ಹಾಕಿಲ್ಲ. ಎಲ್ಲಿಯವರೆ ಸಮಾಜಿಕ ಸಮನತೆ ಬರೋದಿಲ್ಲವೋ ಅಲ್ಲಿಯವರೆಗೆ ಮೀಸಲಾತಿ ಮುಂದುವರೆಯ ಲಿದೆ ಎಂದು ಸ್ಪಷ್ಟವಾಗಿ ಪ್ರದಾನಿ ನರೇಂದ್ರ ಮೋದಿವಯರು ಹೇಳಿದ್ದಾರೆ. ನಿಮ್ಮಲ್ಲಿರುವ ಕುಲಕಸಬುಗಳನ್ನು ಮುಂದುವರೆಸಲ್ಲಿಕ್ಕೆ ಕಲೆ, ಕಸುತಿ ಮುಂದುವರೆಸಲಿಕ್ಕೆ ಇತ್ಯಾದಿಗಳನ್ನು ಕಾರ್ಯಕ್ರಮಗಳು ಹಮ್ಮಿಕೊಂಡಿದ್ದಾರೆ. ಬಂಜಾರ ಸಮಾಜ ಬಾಂಧವರು ನಮ್ಮಗೆ ಸಿಗುವ ಮೀಸಲಾತಿ ದೊರಕಿಸಲ್ಲಿಕ್ಕೆ ಬಿಜೆಪಿ ಪಕ್ಷ ನಿಮ್ಮ ಹಿಂದಿ ಇದೆ ಈ ಉಪ ಚುನಾವ 'ಣೆಯಲ್ಲಿ ವೀರಣ್ಣ ಚರಂತಿಮಠ ಅವರಿಗೆ ಹೆಚ್ಚಿನ ಮತಗಳನ್ನು ನೀಡಿ ಗೆಲ್ಲಿಸಬೇಕು ಎಂದು ಹೇಳಿ ಮನವಿ ಮಾಡಿದರು.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ಶಾಸಕ ಪಿ ರಾಜೀವ ಮಾತನಾಡಿ, ಮೀಸಲಾತಿಯಲ್ಲಿ ಕಾಂಗ್ರೆಸ್ ಪಕ್ಷವು ಅನ್ಯಾಯ ಮಾಡುತ್ತಿದೆ. ಸದಾಶಿವ ಆಯೋಗದ ವರದಿಯಲ್ಲಿ ಅಂಕಿಅಂಶಗಳನ್ನು ಗಮನಿಸಿ ರಾಜ್ಯದಲ್ಲಿ ಎಸ್‌ಸಿ ಪಟ್ಟಿರುವ ಬಂಜಾರ, ಭೋವಿ,ಕೊರಂ, ಕೊರಚ ಜಾತಿಗಳ ಸಮುದಾಯದ ಜನರು ಶಾಸ್ವತವಾಗಿ ಎಸ್‌ಸಿ ಪಟ್ಟಿಯಲ್ಲಿ ಇರಬೇಕು ಎಂದು ಗಮನಿಸಿ ಮೀಸಲಾತಿ ವರ್ಗಿಕರಣ ಮಾಡಿ ಇದರಲ್ಲಿ ನಾಲ್ಕು ಜಾತಿಸೇರಿಸಿ 4.5 ರಷ್ಟು ಮೀಸಲಾತಿ ಬಿ.ಜೆ.ಪಿ ಸರ್ಕಾರ ಮಾಡಿತ್ತು. ಆದರೆ ಅಂದು ಜನರು ಇದನ್ನು ತಪ್ಪಾಗಿ ಅರ್ಥೈಸಿಕೊಂಡ ಪ್ರಯುಕ್ತ ಬಿಜೆಪಿ ಹಿನ್ನಡೆ ಉಂಟಾಯಿತು. ಆದರೆ ಕಾಂಗ್ರೆಸ್ ಸರ್ಕಾರ ನಮಗೆ ಬಿಜೆಪಿ ನೀಡಿದ ಮೀಸಲಾತಿ ಬಿಟ್ಟು ಅದರಲ್ಲಿ ಅನೇಕ ಉಪ ಜಾತಿಗಳನ್ನು ಸೇರಿಸಿ ಶೇ 05 ರಷ್ಟು ಮಾಡಿ ನಮಗೆ ಅನ್ಯಾಯ ಮಾಡುತ್ತಿದೆ. ಮೀಸ 'ಲಾತಿ ರೋಸ್ಟರ ಬಿಂದು ಪ್ರಕಾರ ಮೀಸಲಾತಿ ನೀಡಿದರೆ ಇದರಿಂದ ನಮಗೆ ಭಾರಿ ಅನ್ಯಾಯವಾಗಲಿದೆ. ಇದರಿಂದ ಬಂಜಾರಾ ಸಮುದಾಯ ಬೀದಿಪಾಲು ಮತ್ತು ಮಕ್ಕಳು ಶಿಕ್ಷಣದಿಂದ ವಂಚಿತರಾಗಲಿದ್ದಾರೆ. ಸಮಾಜ ಬಾಂಧವರು ಅರ್ಥಮಾಡಿಕೊಂಡು ಈ ಹೇಳಿಕೆಯಲ್ಲಿ ಯಾವುದು ಸತ್ಯ ಮತ್ತು ಅಸತ್ಯ ಅದನ್ನು ಅರಿತು ಬಿಜೆಪಿ ಪಕ್ಷದ ಅಭ್ಯರ್ಥಿಗೆ ಮತ ನೀಡಿ ಈ ಚುನಾಣೆಯಲ್ಲಿ ಕಾಂಗ್ರೇಸ್ ಪಕ್ಷಕ್ಕೆ ತಕ್ಕ ಉತ್ತರ ನೀಡಲು ಮುಂದಾಗಬೇಕು ಎಂದರು.

ಸಿರಹಟ್ಟಿ ಶಾಸಕ ಡಾ, ಚಂದ್ರು ಲಮಾಣಿ ಮಾತನಾಡಿ, ಬಂಜಾರ ಸಮಾಜಕ್ಕೆ ಸಾಮಾಜಿಕ ನ್ಯಾಯ ಸಿಗಬೇಕಾದರೆ ಬಿಜೆಪಿಯಿಂದ ಮಾತ್ರ ಸಾಧ್ಯ. ಇದನ್ನು ನಮ್ಮ ಸಮಾಜ ಬಾಂಧವರು ಅರಿತುಕೊಂಡ ಈ ಚುನಾವಣೆಯಲ್ಲಿ ವೀರಣ್ಣ ಚರಂತಿಮಠ ಗುರುಗಳಿಗೆ ನಿಮ್ಮ ಅಮೂಲ್ಯವಾದ ಮತಗಳು ನೀಡಿ ಗೆಲ್ಲಿಸಬೇಕು ಎಂದರು.

ಶಾಸಕ ಪ್ರಭು ಚವ್ಹಾಣ ಮಾತನಾಡಿ, ಬಂಜಾರ ಸಮಾಜದ ಅಭಿವೃದ್ದಿಗೆ ಹೆಚ್ಚಿನ ಆಧ್ಯತೆ ನೀಡಿದ್ದು ನಮ್ಮ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂ ರಪ್ಪನವರು ತಾಂಡಾ ಅಭಿವೃದ್ದಿ ನಿಗಮ, ಕಂದಾಯ ಗ್ರಾಮ. ಸೇವಾಲಾಲ ಮಹಾ ರಾಜರ ಜನ್ಮ ಸ್ಥಳವಾದ ಸೋರಗೊಂಡ ಕೊಪ್ಪ ಅಭಿವೃದ್ದಿ ಹೆಚ್ಚಿನ ಒತ್ತು ನೀಡಿದ ಕಿರ್ತಿ ಅವರಿಗೆ ಸಲ್ಲುತ್ತದೆ. ಈ ಚುನಾವಣೆಲ್ಲಿ ಬಿಜೆಪಿ ಪಕ್ಷಕ್ಕೆ ಮತಗಳನ್ನು ನೀಡಿ ಗೆಲ್ಲಿಸಬೇಕು ಎಂದರು.

ಸೂರಪುರ ಮಾಜಿ ಶಾಸಕ ರಾಜುಗೌಡ ನಾಯಕ ಮಾತನಾಡಿ, ವಿಶ್ವಾಸ ಮತ್ತು ನಂಬಿಕೆಗೆ ಇನ್ನೊಂದು ಹೆಸರು ಬಂಜಾರ ಸಮಾಜ. ಕೊಟ್ಟ ಮಾತಿನಂತೆ ನಡೆದುಕೊಳ್ಳುವ ಸಮಾಜ ಇದಾಗಿದೆ. ಈ ಚುನಾವಣೆಲ್ಲಿ ಕಾಂಗ್ರೇಸ್ ಪಕ್ಷಕ್ಕೆ ತಕ್ಕ ಉತ್ತರ ನೀಡಿ ಬಿಜೆಪಿಯ ಚಂರತಿಮಠ ಗುರುಗಳಿಗೆ ಬೆಂಬಲ ನೀಡಬೇಕು ಎಂದರು.

ವಿಧಾನ ಪರಿಷತ್ ಶಾಸಕ ಹಣಮಂತ ಆರ್.ನಿರಾಣಿ, ಪಿ.ಎಚ.ಪೂಜಾರಿ, ಎನ್.ರವಿಕುಮಾರ, ಅಣ್ಣಸಾಹೇಬ ಜೋಲ್ಲೆ, ಈರಣ್ಣ ಕಡಾಡಿ, ಬಂಜಾರ ಸಮಾಜ ಜಿಲ್ಲಾಧ್ಯಕ್ಷ ಹೂವಪ್ಪ ರಾಠೋಡ, ಬಂಜಾರ ಸಮಾಜ ಮುಖಂಡ ಬಲರಾಮ ನಾಯಕ, ರತ್ನಪ್ಪ ರಾಠೋಡ ಹಾಗೂ ಇನ್ನೂ ಅನೇಕರು ಇದ್ದರು.

# ದೇಶ ಕಂಡ ಅಪ್ರತಿಮ ನಾಯಕ ಬಾಬು ಜಗಜೀವನ್ ರಾಮ್



**ಬೆಳಗಾವಿ ವಾರ್ತೆ ಬೆಳಗಾವಿ:** ಇತಿಹಾಸ ಮಹಾನ್ ವ್ಯಕ್ತಿಗಳನ್ನ ನೇಮಿಸುತ್ತದೆ ಆದರೆ ಸಮಯ ಕೆಲವೇ ಕೆಲವು ವ್ಯಕ್ತಿಗಳನ್ನು ನೆನಪಿಸುತ್ತದೆ. ಅಂತಹವರಲ್ಲಿ ಡಾ. ಬಾಬು ಜಗಜೀವನ್ ರಾಮ್ ಒಬ್ಬರು ಎಂದು ಸಂಜೀವ ಕೆ ತಳವಾರ ಅವರು ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆಯು ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಸಂಗಮೇಶ್ವರ ನಗರದ ಡಾ. ಬಾಬು ಜಗಜೀವನ್ ರಾಮ್ ಉದ್ಯಾನವನದಲ್ಲಿ ನಡೆದ ಹಸಿರುಕ್ರಾಂತಿ ಹರಿಕಾರ ಡಾ. ಬಾಬು ಜಗಜೀವನ್ ರಾಮ್ ಜಯಂತಿ; ಉತ್ಸವ–2026ರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮಾನತೆ ಸಮಾಜದ ಅಡಿಪಾಯ ಎಂದು ಹೇಳಿ ಅದಕ್ಕೆ ಶ್ರಮಿಸಿ, ಕಾರ್ಮಿಕರ ಹಿತವೇ ದೇಶದ ಹಿತ ಎಂದು ಹೇಳಿದರು. ಆಹಾರ ಭದ್ರತೆ ದೇಶದ ಭದ್ರತೆ ಎಂದು ಸಂದೇಶ ನೀಡಿ ಹಗಲಿರುಳು ದುಡಿದ ದಿಮಂತ ನಾಯಕ ಡಾ. ಬಾಬು ಜಗಜೀವನ್ ರಾಮ್ ಎಂದು ಹೇಳಿದರು.

ಸಂವಿಧಾನ ಸರಿಯಾದ ರೀತಿಯಲ್ಲಿ ಜಾರಿಯಾಗಬೇಕು, ಸಂದರ್ಭಗಳಿಂದ ಸೋಲದೆ ಆ ಸಮಯವನ್ನೇ ನಿಮ್ಮ ಅವಕಾಶವಾಗಿ ಮಾಡಿಕೊಳ್ಳಿ ಎಂದು ಎಲ್ಲ ಜನರಿಗೆ ತಿಳಿ ಹೇಳಿದ ಡಾ.ಬಾಬು ಜಗಜೀವನ್ ರಾಮ ಅವರ ಜೀವನ, ಆದರ್ಶಗಳನ್ನು ಎಲ್ಲರೂ ಅರಿತುಕೊಳ್ಳಲು ಸಂಜೀವ ಕೆ ತಳವಾರ ಅವರು ಕರೇ ನೀಡಿದರು.

ಪೊಲೀಸ್ ಆಯುಕ್ತರಾದ ಭೂಷಣ್ ಗುಲಾಬರಾವ್ ಬೊರಸೆ ಅವರು ಮಾತನಾಡಿ, ಜಗಜೀವನ ರಾಮ್ ಎಲ್ಲಾ ಯುವಕರಿಗೆ ಸ್ಫೂರ್ತಿಯಾಗಲಿ ಎಲ್ಲರೂ ನನ್ನವರು, ಸಮಾನತೆ, ಸಮಭಾವ ಎಂಬ ಭಾವನೆ ಇಂದ ನಾವು ಬದುಕಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್, ಮಾತನಾಡಿ, ದೇಶ ಕಂಡ ಅಪ್ರತಿಮ ನಾಯಕರಲ್ಲಿ ಜಗಜೀವನ್ ರಾಮ್ ಅವರು ಒಬ್ಬರು, ಕಾರ್ಮಿಕರಿಗೆ ಅನೇಕ ಕಾನೂನು ಗಳನ್ನೂ ಜಾರಿಗೆ ತಂದರು, ಸಮಸ್ಯೆ ಹೇಳುವರು ನಾಯಕರಲ್ಲ ಸಮಸ್ಯೆಗಳನ್ನು ಪರಿಹರಿಸುವ ವ್ಯಕ್ತಿಗಳು ನಾಯಕರಾಗುತ್ತಾರೆ.

ಬಾಬು ಜಗಜೀವನ ರಾಮ್ ಟಾಸ್ಕ್ ಮಾಸ್ಟರ್ ದೇಶದ ಪ್ರತಿ ಸಮಸ್ಯೆ ಪರಿಹರಿಸುವರಲ್ಲಿ ನಿಂತವರು, ಆಹಾರದ ಕೊರತೆಯನ್ನು ಹೋಗಲಾಡಿಸಿ ಬೇರೆ ದೇಶಗಳಿಗೆ ರಫ್ತು ಮಾಡುವಷ್ಟು ಬೆಳೆಸಿರುವುದಕ್ಕೆ ಕಾರಣ ಬಾಬುಜಿ ಯವರು, ದೇಶ ಕಷ್ಟದಲ್ಲಿ ಇದಾಗ ಗಟ್ಟಿಯಾಗಿ ನಿಂತವರು ಬಾಬುಜಿ ಅವರು, ಎಂದು ಹೇಳಿದರು.

ಬೆಳಗಾವಿ ಉಪ ವಿಭಾಗಾಧಿಕಾರಿ ಶ್ರವಣ್ ನಾಯಕ್ ಅವರು ಮಾತನಾಡಿ, ಆಡಳಿತ ಎಂದರೆ ಅಧಿಕಾರ ಬಯಸುವುದಲ್ಲ ಅದರಿಂದ ಎಷ್ಟು ಜನರಿಗೆ ಅನುಕೂಲ ಮಾಡಿದ್ದೀವಿ ಎಂಬುದು ಮುಖ್ಯ; ಜಗಜೀವನ ರಾಮ್ ಅವರ ಜೀವನವು ಸಾಮಾಜಿಕ ವ್ಯವಸ್ಥೆಗೆ ಅಡಿಪಾಯ ಅವರ ವಿಚಾರಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ರಾಮನಗೌಡ ಕನ್ನೊಳ್ಳಿ, ಪರಶುರಾಮ ವಗ್ಗನವರು, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಸವರಾಜ ಚನ್ನಯ್ಯನವರ, ಕರ್ನಾಟಕ ನೌಕರ ಸಂಘದ ಅಧ್ಯಕ್ಷ ರಾಯಪ್ಪಗೋಳ, ಕ್ರೀಡಾ ಇಲಾಖೆಯ ಉಪ ನಿರ್ದೇಶಕರು, ಸಮಾಜದ ಮುಖಂಡರಾದ ಭೀಮರಾವ್ ಪವಾರ್, ಮಲ್ಲೇಶ ಚೌಗಲಾ, ಮಹಾದೇವ ತಳವಾರ, ಭಾವಕಣ್ಣ ಭಂಗ್ಯಾಗೋಳ, ಸಿದ್ರಾಯಿ ಮೇತ್ರಿ, ಲಕ್ಷ್ಮಣ್ ಲಗಮಪ್ಪಗೋಳ, ಬಸವರಾಜ ಅರವಳ್ಳಿ, ಮಹಾದೇವ ಪೊಲ್, ಬಸವರಾಜ ರಾಯವಾಗೋಲ್, ಸುಧೀರ ಚೌಗಲೆ, ಸಂದೀಪ ಕೋಲಕಾರ, ಹಿರಲಾಳ ಚೌಹಾಣ್, ಜೀವನ್ ಕುರಾನೆ, ಸಾರ್ವಜನಿಕರು ಉಪಸ್ಥಿತರಿದ್ದರು.

# ಡಾ.ಬಾಬುಜಗಜೀವನ ರಾಂ ಅವರ ದೂರದೃಷ್ಟಿ ಮತ್ತು ಅವರ ಸಾಮಾಜಿಕ ಕಳಕಳಿಯಿಂದ ಸಮಾಜವು ಪ್ರಗತಿಪರವಾಗಿದೆ: ಮಹಾದೇವ ಹರಿಜನ



**ಬೆಳಗಾವಿ ವಾರ್ತೆ ಧಾರವಾಡ:** ದೇಶದ ಹಸಿರುಕ್ರಾಂತಿ ಹರಿಕಾರ, ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ ರಾಂ ಅವರ ದೂರದೃಷ್ಟಿ ಮತ್ತು ಸಾಮಾಜಿಕ ಕಳಕಳಿಯಿಂದ ಸಮಾಜವು ಪ್ರಗತಿಪರ ಮಾರ್ಗದಲ್ಲಿ ಸಾಗಲು, ಸದೃಢ ಶಕ್ತಿಯುತ ರಾಷ್ಟ್ರವಾಗಿ ಭಾರತ ಬೆಳೆಯಲು ಸಾಧ್ಯವಾಗಿದೆ ಎಂದು ಹುಬ್ಬಳ್ಳಿಯ ಎಸ್.ಜೆ.ಎಂ.ವಿ.ಎಸ್ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯ ರಾಜ್ಯ ಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಮಹಾದೇವ ಹರಿಜನ ಅವರು ಹೇಳಿದರು.

ಅವರು ಧಾರವಾಡ ನಗರದ ಸನ್ಮತಿ ಮಾರ್ಗದ ಹತ್ತಿರದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಸಮಾಜ ಕಲ್ಯಾಣ ಇಲಾಖೆ ಹಾಗೂ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯು ಸಹಯೋಗದಲ್ಲಿ ಆಯೋಜಿಸಿದ್ದ, ಹಸಿರು ಕ್ರಾಂತಿಯ ಹರಿಕಾರ, ಭಾರತದ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ ರಾಂ ಜಯಂತಿ ಆಚರಣೆಯ ಅಂಗವಾಗಿ ವಿಚಾರಗೋಷ್ಠಿ ಮಾತನಾಡಿದರು.

ಬಾಬು ಜಗಜೀವನ ರಾಂ ಅವರು ನಮ್ಮ ದೇಶದ ಸಾಮಾಜಿಕ ಸುಧಾರಣೆಗೆ, ಮಹಿಳಾ ಶಿಕ್ಷಣಕ್ಕೆ, ಅಲ್ಪಸಂಖ್ಯಾತ ಹಕ್ಕುಗಳಿಗೆ, ಮತ್ತು ಪರಿಸರ ಸಂರಕ್ಷಣೆಗೆ ಅಪಾರವಾದ ಕೊಡುಗೆಗಳನ್ನು ನೀಡಿದ್ದಾರೆ ಅವರು ಹೇಳಿದರು.

ದೇಶದ ಪ್ರಗತಿಯು ನಿತ್ಯದ ಶ್ರಮ, ಸಮಗ್ರ ಯೋಜನೆ ಮತ್ತು ಸಮುದಾಯದ ಸಹಕಾರದ ಮೂಲಕ ಸಾಧ್ಯ ಎಂಬುದನ್ನು ಬಾಬು ಜಗಜೀವನ ರಾಂ ಅವರು ತಿಳಿಸಿದ್ದರು ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಜಗದೀಶ ಹೆಬ್ಬಳ್ಳಿ ಅವರು ಮಾತನಾಡಿ, ದಲಿತರ ಮತ್ತು ಹಿಂದುಳಿದ ವರ್ಗಗಳ ಬದುಕಿಗೆ ಬೆಳಕಾದ ಮಹಾನ ನಾಯಕರು ತಮ್ಮ ದಯಾಮಯ ವ್ಯಕ್ತಿತ್ವದಿಂದ ಸಮಾಜದ ನೊಂದವರ ಕಣ್ಣೀರನ್ನು ಒರೆಸಿದವರು. ಬಡವರ ಹಿತಕ್ಕಾಗಿ ಅನೇಕ ಕಲ್ಯಾಣ ಯೋಜನೆಗಳನ್ನು ರೂಪಿಸುವ ಮೂಲಕ ಅವರು ಜನರ ಜೀವನದಲ್ಲಿ ಆಶಾಕಿರಣವಾಗಿ ಕಂಗೊಳಿಸಿದರು ಎಂದು ಹೇಳಿದರು.

ಆಹಾರ ಭದ್ರತೆ, ಸಮಾನತೆ ಮತ್ತು ನ್ಯಾಯಕ್ಕಾಗಿ ಸದಾ ಹೋರಾಟ ನಡೆಸಿದ ಅವರು, ತಮ್ಮ ಚಿಂತನೆಗಳ ಮೂಲಕ ಸಮಾಜದ ಪ್ರಗತಿಗೆ ದಾರಿದೀಪವಾಗಿದ್ದಾರೆ. ನಾವೆಲ್ಲರೂ ಅವರ ಆದರ್ಶಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಂಡು ಹೋಗುವುದು ಅಗತ್ಯವಾಗಿದೆ ಎಂದು ಅವರು ಹೇಳಿದರು.

ವೇದಿಕೆಯಲ್ಲಿ ಜಿಲ್ಲಾ ಪಂಚಾಯತ ಸಹಾಯಕ ಕಾರ್ಯದರ್ಶಿ ಅಜಯ ಎನ್., ಮಹಾದೇವ ಹುಲಗಜ್ಜಿ ಉಪಸ್ಥಿತರಿದ್ದರು.

ಸಮಾಜ ಕಲ್ಯಾಣ ಇಲಾಖೆಯ ಎಂ.ಬಿ. ಸನ್ನೇರಿ ಅವರು ಸ್ವಾಗತಿಸಿ,ವಂದಿಸಿದರು ಹಾಗೂ ಪ್ರವೀಣ ಮುಸಕಿ ಅವರು ಕಾರ್ಯಕ್ರಮವು ನಿರೂಪಿಸಿದರು.

ವಿಚಾರಗೋಷ್ಠಿಯಲ್ಲಿ ಸಮಾಜದ ಪ್ರಮುಖರು, ದಲಿತ ಚಿಂತಕರು,

ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿಗಳು, ಸಮಾಜದ ಹಿರಿಯರು, ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು, ಸಾರ್ವಜನಿಕರು ಭಾಗವಹಿಸಿದ್ದರು.

# ಡಾ.ಬಾಬು ಜಗಜೀವನ ರಾಮರವರ ಜಯಂತಿ




**ಬೆಳಗಾವಿ ವಾರ್ತೆ ಹುಬ್ಬಳ್ಳಿ:** ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿಯಲ್ಲಿ ಡಾ.ಬಾಬು ಜಗಜೀವನರಾಮ ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ದೀಪ ಬೆಳಗಿಸುವುದರ ಮೂಲಕ ಜಯಂತಿಯನ್ನು ಆಚರಿಸಲಾಯಿತು.

ಕಾರ್ಯಕ್ರಮ ಉದ್ದೇಶಿಸಿ ಮುಖ್ಯ ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳಾದ ಇಮಾಮ್ ಕಾಸಿಮ್ ಕಂದಗಲ್ ಮಾತನಾಡಿದರು.

ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳಾದ ಪಿ.ಆರ್.ಕಿರಣಗಿ ರವರು ಡಾ.ಬಾಬು ಜಗಜೀವನರಾಮ ಜೀವನ ಚರಿತ್ರೆಯ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ವಿ.ಎಫ್.ಬಿಜಾಪೂರ, ಜಯಪ್ಪ ಮಳಗಿ, ದ್ಯಾಮಣ್ಣ ಭಜಂತ್ರಿ ಹಾಗೂ ಕೇಂದ್ರ ಕಛೇರಿಯ ಇನ್ನಿತರ ಅಧಿಕಾರಿ/ಸಿಬ್ಬಂದಿಗಳು ಉಪಸ್ಥಿತರಿದ್ದರು. ವಿ.ಎಫ್ ಬಿಜಾಪೂರ ರವರು ನಿರೂಪಿಸಿ ವಂದಿಸಿದರು.

# ಹುಬ್ಬಳ್ಳಿಯಲ್ಲಿ ಮತ್ತೊಂದು ಲೈಂಗಿಕ ದೌರ್ಜನ್ಯ ಪ್ರಕರಣ ಬೆಳಕಿಗೆ



**ಬೆಳಗಾವಿ ವಾರ್ತೆ ಹುಬ್ಬಳ್ಳಿ:** ನಗರದಲ್ಲಿ ಜಿಮ್‌ಗೆ ಸಂಬಂಧಿಸಿದ ವಿವಾದದ ಬೆನ್ನಲ್ಲೇ ಮತ್ತೊಂದು ಗಂಭೀರ ಲೈಂಗಿಕ ದೌರ್ಜನ್ಯ ಪ್ರಕರಣ ಬೆಳಕಿಗೆ ಬಂದಿದೆ. ಅನ್ಯ ಕೋಮಿನ ಯುವಕನೊಬ್ಬ ಹಿಂದು ಯುವತಿಗೆ ಲೈಂಗಿಕ ದೌರ್ಜನ್ಯ ಎಸಗಿ ಬೆದರಿಕೆ ಹಾಕಿದ ಆರೋಪದ ಮೇಲೆ ಕೇಶ್ವಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪೊಲೀಸರ ಮಾಹಿತಿ ಪ್ರಕಾರ, ಮುಫೀಜ್ ಮಿಯಾನವರ (23) ಎಂಬ ಯುವಕನ ವಿರುದ್ಧ ಯುವತಿ ದೂರು ನೀಡಿದ್ದಾಳೆ. ಸುಮಾರು ಐದು ವರ್ಷಗಳ ಹಿಂದೆ ಕಾರ್ಯಕ್ರಮವೊಂದರಲ್ಲಿ ಪರಿಚಯವಾದ ಈ ಇಬ್ಬರ ನಡುವೆ ಬಳಿಕ ಸ್ನೇಹ ಬೆಳೆದಿದ್ದು, ಅದನ್ನು ದುರುಪಯೋಗ ಮಾಡಿಕೊಂಡು ಯುವಕ ಆರೋಪಿತ ಕೃತ್ಯ ಎಸಗಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಯುವತಿ ನೀಡಿರುವ ದೂರಿನ ಪ್ರಕಾರ, ಯುವಕ ಅವಳನ್ನು ಗದಗ ರಸ್ತೆ ಮೇಲ್ಸೇತುವೆ ಸಮೀಪಕ್ಕೆ ಕರೆದುಕೊಂಡು ಹೋಗಿ ಲೈಂಗಿಕ ದೌರ್ಜನ್ಯ ಎಸಗಿ, ಅದರ ಫೋಟೋ ಮತ್ತು ವಿಡಿಯೋಗಳನ್ನು ತೆಗೆದುಕೊಂಡಿದ್ದಾನೆ. ನಂತರ ಅವುಗಳನ್ನು ಬಳಸಿಕೊಂಡು ಬೆದರಿಕೆ ಹಾಕಿ 2025ರ ನವೆಂಬರ್ ತಿಂಗಳಲ್ಲಿ ಅವಳ ಮನೆಗೆ ತೆರಳಿ ಮತ್ತೆ ದೌರ್ಜನ್ಯ ಎಸಗಿದ ಆರೋಪ ಇದೆ.

“ಈ ವಿಷಯವನ್ನು ಯಾರಿಗಾದರೂ ತಿಳಿಸಿದರೆ ಕುಟುಂಬದವರನ್ನು ಜೀವಂತ ಬಿಡುವುದಿಲ್ಲ” ಎಂದು ಬೆದರಿಕೆ ಹಾಕಿದ್ದಾನೆ ಎಂದು ಯುವತಿ ದೂರಿನಲ್ಲಿ ಉಲ್ಲೇಖಿಸಿದ್ದಾಳೆ.

## ನಾಗರಬೆಟ್ಟದ ಆಕ್ಸ್‌ಫರ್ಡ್ ಕಾಲೇಜಿನಲ್ಲಿ ಪ್ರತಿಭಾ ಪುರಸ್ಕಾರ: 187 ಮೆಡಿಕಲ್ ವಿದ್ಯಾರ್ಥಿಗಳಿಗೆ ಸನ್ಮಾನ

# ಆಕ್ಸ್‌ಫರ್ಡ್ ಜೀನಿಯಸ್ ಎಕ್ಸಾಮ್: ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಹಾಗೂ ಉಚಿತ ಶಿಕ್ಷಣದ ಭರವಸೆ: ಅಮೀತಗೌಡ ಪಾಟೀಲ

**ಬೆಳಗಾವಿ ವಾರ್ತೆ ಮುದ್ದೇಬಿಹಾಳ:** ಇಂದಿನ ಕಾಲಘಟ್ಟದಲ್ಲಿ ಪೋಷಕರು ಆಡಂಬರದ ಮದುವೆ ಹಾಗೂ ಇತರ ಕಾರ್ಯಕ್ರಮಗಳಿಗೆ ಮಾಡುವ ದುಂದುವೆಚ್ಚವನ್ನು ಕಡಿಮೆ ಮಾಡಬೇಕು. ಮನೆ ಕಟ್ಟಲು ಸಾಲ ಮಾಡುವುದಕ್ಕಿಂತ ಮಕ್ಕಳ ಶಿಕ್ಷಣಕ್ಕಾಗಿ ಸಾಲ ಮಾಡಿಯಾದರೂ ಅವರನ್ನು ಸುಶಿಕ್ಷಿತರನ್ನಾಗಿ ಮಾಡುವುದು ಶ್ರೇಯಸ್ಕರ," ಎಂದು ಹೈದರಾಬಾದ್ ಮತ್ತು ಕೋಲ್ಕತ್ತಾದ ಖ್ಯಾತ ಸ್ಪರ್ಧಾತ್ಮಕ ಪರೀಕ್ಷಾ ತರಬೇತುದಾರರಾದ ಗಿರಿಧರ್ ಪೂಜಾರ ಹೇಳಿದರು.

ತಾಲ್ಲೂಕಿನ ನಾಗರಬೆಟ್ಟ ಗುಡ್ಡದ ಮೇಲೆ ಇರುವ ಆಕ್ಸ್‌ಫರ್ಡ್ ಪಾಟೀಲ್ಸ್ ಪಿಯು ಕಾಲೇಜಿನಲ್ಲಿ' ಶನಿವಾರ ಆಯೋಜಿಸಿದ್ದ 'ಆಕ್ಸ್‌ಫರ್ಡ್ ಜೀನಿಯಸ್ ಎಕ್ಸಾಮ್' ಫಲಿತಾಂಶ ಹಾಗೂ ವೈದ್ಯಕೀಯ ಶಿಕ್ಷಣಕ್ಕೆ (MBBS) ಆಯ್ಕೆಯಾದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ 'ಪ್ರತಿಭಾ ಪುರಸ್ಕಾರ' ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಗಳಾಗಿ ಮಾತನಾಡಿದರು.

**ಶಿಕ್ಷಣ ಕ್ಷೇತ್ರಕ್ಕೆ ಆಕ್ಸ್‌ಫರ್ಡ್ ಕೊಡುಗೆ ಅಪಾರ:** ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಸಚಿವರಾದ (ಆಡಳಿತ) ಶ್ರೀ ಶಂಕರಗೌಡ ಎಸ್. ಸೋಮನಾಳ (ಏಂಖ), "ಗ್ರಾಮೀಣ ಭಾಗದ ಬಡ ಹಾಗೂ ರೈತ ಮಕ್ಕಳು ಇಂದು ವೈದ್ಯಕೀಯ ಸೀಟು ಪಡೆಯುತ್ತಿರುವುದು ಸಂಸ್ಥೆಯ ಶೈಕ್ಷಣಿಕ ಗುಣಮಟ್ಟಕ್ಕೆ ಸಾಕ್ಷಿ. ವಿದ್ಯಾರ್ಥಿಗಳಿಗೆ ಮೊಬೈಲ್ ಫೋನ್ ದೊಡ್ಡ ವೈರಿಯಾಗಿದ್ದು, ಅದನ್ನು ದೂರವಿಟ್ಟು ಆತ್ಮವಿಶ್ವಾಸದಿಂದ ಸಾಧನೆ ಮಾಡಬೇಕು. ಪೋಷಕರು ಮಕ್ಕಳ ಮೇಲೆ ಅನಗತ್ಯ ಒತ್ತಡ ಹೇರಬಾರದು," ಎಂದು ಕಿವಿಮಾತು ಹೇಳಿದರು.

ಸಮಾಜ ಸೇವಕ ಹಾಗೂ ಕಾಂಗ್ರೆಸ್ ಮುಖಂಡ ಶಾಂತಗೌಡ ಪಾಟೀಲ (ನಡಹಳ್ಳಿ) ಮಾತನಾಡಿ, "ಮಸಾರಿ ಹಳ್ಳಿಯಂತಿದ್ದ ಈ ಭಾಗದಲ್ಲಿ ಮಲ್ಲನಗೌಡ ಪಾಟೀಲರು ಅಂದು ಸಣ್ಣದಾಗಿ ಕಟ್ಟಿದ ಈ ಸಂಸ್ಥೆ ಇಂದು ಜ್ಞಾನಜ್ಯೋತಿಯಾಗಿ ಬೆಳಗುತ್ತಿದೆ. ಭ್ರಷ್ಟಾಚಾರದ ಇಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಕೇವಲ ಪದವೀಧರರಾಗದೆ, ಮೌಲ್ಯಯುತ ವೈದ್ಯರು ಮತ್ತು ಇಂಜಿನಿಯರ್, ಆಗುವ ಮೂಲಕ ದೇಶದ ಸೇವೆಗೆ ಮುಂದಾಗಬೇಕು,




ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣಕ್ಕೆ ವಿದ್ಯಾರ್ಥಿಗಳು ಉತ್ತಮ ವೈದ್ಯರು, ಇಂಜಿನಿಯರ್ ಹಾಗೂ ರಾಜಕಾರಣಿಗಳಾಗಬೇಕು ಎಂದರು.

**3 ಕೋಟಿ ವಿದ್ಯಾರ್ಥಿ ವೇತನದ ಘೋಷಣೆ:** ಸಂಸ್ಥೆಯ ಆಡಳಿತಾಧಿಕಾರಿ ಅಮೀತಗೌಡ ಪಾಟೀಲ ಮಾತನಾಡಿ, "ನಮ್ಮ ಸಂಸ್ಥೆಯಿಂದ ಈ ಬಾರಿ ಒಟ್ಟು 187 ವಿದ್ಯಾರ್ಥಿಗಳು ಮೆಡಿಕಲ್ ಸೀಟು ಪಡೆದು ದಾಖಲೆ ಬರೆದಿದ್ದಾರೆ. ಬಡ ಪ್ರತಿಭಾವಂತ ಮಕ್ಕಳ ಶಿಕ್ಷಣಕ್ಕೆ ಅಡ್ಡಿಯಾಗಬಾರದೆಂದು ಸಂಸ್ಥೆಯಿಂದ 3 ಕೋಟಿ ವಿದ್ಯಾರ್ಥಿ ವೇತನ ಘೋಷಿಸಲಾಗಿದೆ. ಜೀನಿಯಸ್ ಪರೀಕ್ಷೆಯಲ್ಲಿ ಟಾಪ್ 20ರಲ್ಲಿ ಬಂದವರಿಗೆ ಉಚಿತ ಶಿಕ್ಷಣ ಹಾಗೂ ವಸತಿ ಸೌಲಭ್ಯ ನೀಡಲಾಗುತ್ತಿದೆ," ಎಂದು ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಮೆಡಿಕಲ್ ಸೀಟು ಪಡೆದ 187 ವಿದ್ಯಾರ್ಥಿಗಳನ್ನು ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು.

**ಗಣ್ಯರ ಮಾತುಗಳು:** ದೇವಿಕಾ ಸುಬ್ಬರಾಂ ಫೌಂಡೇಶನ್ ಅಧ್ಯಕ್ಷೆ ಪಲ್ಲವಿ ನಾಡಗೌಡ ಮಾತನಾಡಿ, "ವಿದ್ಯಾರ್ಥಿಗಳು ಸೂರ್ಯನಂತೆ ಬೆಳಗಬೇಕು. ಮಕ್ಕಳನ್ನು ಕ್ರೀಡೆ ಮತ್ತು ಉತ್ತಮ ಗುಣಗಳ ಕಡೆಗೆ ಪ್ರೇರೇಪಿಸಬೇಕು," ಎಂದರು. ಪ್ರಾಂಶುಪಾಲರಾದ ಡಾ. ಎಸ್.ಬಿ. ಬಿರಾದಾರ ಹಾಗೂ ಡಾ. ಬಸವರಾಜ ಅಸ್ಕಿ ಮಾತನಾಡಿ, "ಗ್ರಾಮೀಣ ಸಂಸ್ಕೃತಿಯನ್ನು ಉಳಿಸುತ್ತಾ ವಿದ್ಯಾರ್ಥಿಗಳು ಸಂಸ್ಥೆಯ ಹೆಸರನ್ನು ಎತ್ತರಕ್ಕೆ ಕೊಂಡೊಯ್ಯಬೇಕು," ಎಂದರು. ಮುದನೂರಿನ ಕಂಠಿ ಮಠದ ಷ.ಬ್ರ.ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಚನ ನೀಡಿ ಮಕ್ಕಳಿಗೆ ಶುಭ ಹಾರೈಸಿದರು.

ಪರೀಕ್ಷೆಯಲ್ಲಿ ಆಯ್ಕೆ ವಿದ್ಯಾರ್ಥಿಗಳಿಗೆ ಟಾಪ್1 ರಿಂದ 20 ವಿದ್ಯಾರ್ಥಿಗಳಿಗೆ: ಎರಡು ವರ್ಷಗಳ ಕಾಲ ಸಂಪೂರ್ಣ ಉಚಿತ ಶಿಕ್ಷಣದೊಂದಿಗೆ ಉಚಿತ ಹಾಸ್ಟೆಲ್ ಮತ್ತು ಊಟ (ಮೆಸ್) ಸೌಲಭ್ಯ (ಅಂದಾಜು 3.80 ಲಕ್ಷ ರೂ. ಮೌಲ್ಯ). 21 ರಿಂದ 80ನೇ ಶ್ರೇಯಾಂಕ: ಶೇ. 100 ರಿಂದ ಶೇ. 15ರ ವರೆಗೆ ಶಿಕ್ಷಣ ಶುಲ್ಕದಲ್ಲಿ ರಿಯಾಯಿತಿ ವಿದ್ಯಾರ್ಥಿಗಳಿಗೆ ದೊರೆಯಲಿದೆ ಎಂದು ಘೋಷಣೆ ಮಾಡಿದರು.

**ಪರೀಕ್ಷಾ ಫಲಿತಾಂಶ:**

ಒಟ್ಟು 2,700 ಪರೀಕ್ಷೆ ಬರೆದಿದ್ದು, ಅಕುಲ್ ಸವಣೂರು (ಪ್ರಥಮ), ಅಜಯಕುಮಾರ ಜಗ್ಗಲ್ (ದ್ವಿತೀಯ), ಶಿವಕುಮಾರ ಕಡಿಮನಿ (ತೃತೀಯ), ಕೀರ್ತನಾ ಮಸಳಗಿ (ನಾಲ್ಕನೇ) ಹಾಗೂ ಶ್ರೇಯಾ ಗಲಿ (ಐದನೇ) ಸ್ಥಾನ ಪಡೆದಿದ್ದಾರೆ.

ಕಾರ್ಯಕ್ರಮದಲ್ಲಿ ಎನ್.ವಿ. ಬಿರಾದಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಸಂಸ್ಥೆಯ ಅಧ್ಯಕ್ಷ ಎಂ.ಎಸ್. ಪಾಟೀಲ, ನಿರ್ದೇಶಕ ದರ್ಶನಗೌಡ ಪಾಟೀಲ, ಮುಖ್ಯ ವ್ಯವಸ್ಥಾಪಕ ವಿಜಯಕುಮಾರ ಪಾಟೀಲ, ಪ್ರಾಂಶುಪಾಲ ರೇವಸಿದ್ದಪ್ಪ ಚಲವಾದಿ, ಇಂಗ್ಲೀಷ್ ಮಾಧ್ಯಮದ ಮುಖ್ಯಗುರುಗಳಾದ ಇಸ್ಮಾಯಿಲ್ ಮಣಿಯಾರ, ಶಿಕ್ಷಕರಾದ ಸಂಗಮೇಶ ಹೂಗಾರ, ರಾಜಶೇಖರ ಹಿರೇಮಠ, ಆನಂದ ನಾವಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ನಮ್ಮ ಸಂಸ್ಥೆಯು ಕೇವಲ ಲಾಭಕ್ಕಾಗಿ ಕೆಲಸ ಮಾಡುತ್ತಿಲ್ಲ, ಬದಲಾಗಿ ಗ್ರಾಮೀಣ ಭಾಗದ ಬಡ ಪ್ರತಿಭಾವಂತರಿಗೆ ದಾರಿಯಾಗುತ್ತಿದೆ. ಈ ವರ್ಷ ಸಂಸ್ಥೆಯಿಂದ ಬರೋಬ್ಬರಿ 187 ವಿದ್ಯಾರ್ಥಿಗಳು ವೈದ್ಯಕೀಯ (MBBS) ಸೀಟು ಪಡೆದಿರುವುದು ನಮ್ಮ ಸಾಧನೆಗೆ ಹಿಡಿದ ಕನ್ನಡಿ. ಬಡತನದ ಕಾರಣಕ್ಕೆ ಯಾವ ಮಗುವೂ ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಈ ಬಾರಿ 3 ಕೋಟಿ ವಿದ್ಯಾರ್ಥಿ ವೇತನ ಸ್ಕಾಲರ್ಶಿಪ್ ಘೋಷಿಸಿದ್ದೇವೆ. ನಮ್ಮಲ್ಲಿ ಕಲಿತ ವಿದ್ಯಾರ್ಥಿಗಳು ಇಂದು ದೇಶದ ಉನ್ನತ ಹುದ್ದೆಗಳಲ್ಲಿದ್ದಾರೆ."

**ಅಮೀತಗೌಡ ಪಾಟೀಲ,**
**ಆಡಳಿತಾಧಿಕಾರಿಗಳು, ಆಕ್ಸ್‌ಫರ್ಡ್ ಸಂಸ್ಥೆ ನಾಗರಬೆಟ್ಟ.**

**187 ವಿದ್ಯಾರ್ಥಿಗಳು:** ಈ ವರ್ಷ ವೈದ್ಯಕೀಯ ಶಿಕ್ಷಣಕ್ಕೆ (MBBS) ಆಯ್ಕೆಯಾದವರು.

**3 ಕೋಟಿ:** ಬಡ ವಿದ್ಯಾರ್ಥಿಗಳಿಗಾಗಿ ಮೀಸಲಿಟ್ಟ ವಿದ್ಯಾರ್ಥಿ ವೇತನ.

**ಟಾಪ್ 20 ವಿದ್ಯಾರ್ಥಿಗಳಿಗೆ:** 2 ವರ್ಷಗಳ ಕಾಲ ಉಚಿತ ಶಿಕ್ಷಣ, ಉಚಿತ ಹಾಸ್ಟೆಲ್ ಹಾಗೂ ಊಟದ ಸೌಲಭ್ಯ (ಅಂದಾಜು 3.80 ಲಕ್ಷ ಮೌಲ್ಯ).

**2700 ವಿದ್ಯಾರ್ಥಿಗಳು:** ವಿವಿಧ ಜಿಲ್ಲೆಗಳಿಂದ ಜೀನಿಯಸ್ ಪರೀಕ್ಷೆಯಲ್ಲಿ ಭಾಗವಹಿಸಿದವರು.

## ಶಿಂದಿಕುರಬೇಟ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಗುರುವಂದನಾ ಕಾರ್ಯಕ್ರಮ

# ವಿದ್ಯಾರ್ಥಿಗಳ ಪ್ರೀತಿ-ವಿಶ್ವಾಸ ಎಂದೂ ಮರೆಯಲಾಗದು-ಖೇಮಲಾಪುರೆ



ಗೋಕಾಕ: ತಾಲೂಕಿನ ಶಿಂದಿಕುರಬೇಟ ಗ್ರಾಮದ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ವಿದ್ಯಾರ್ಥಿನಿಯರಿಂದ ಗುರುವಂದನಾ ಕಾರ್ಯಕ್ರಮದಲ್ಲಿ ಶಿಕ್ಷಕರನ್ನು ಸನ್ಮಾನಿಸುತ್ತಿರುವುದು.

**ಬೆಳಗಾವಿ ವಾರ್ತೆ ಗೋಕಾಕ:** ವಿದ್ಯಾರ್ಥಿಗಳ ಪ್ರೀತಿ, ವಿಶ್ವಾಸ ಎಂದೂ ಮರೆಯಲಾಗದು ಎಂದು ನಿವೃತ್ತ ಮುಖ್ಯೋಪಾಧ್ಯಾಯಿನಿ ಎಸ್.ಎಸ್.ಖೇಮಲಾಪುರೆ ಹೇಳಿದರು.

ಅವರು ರವಿವಾರದಂದು ತಾಲೂಕಿನ ಶಿಂದಿಕುರಬೇಟ ಗ್ರಾಮದ ಸರ್ಕಾರಿ ಹೆಣ್ಣು ಮಕ್ಕಳ ಶಾಲೆಯ ಆವರಣದಲ್ಲಿ ಜರುಗಿದ ಶಿಂದಿಕುರಬೇಟ ಗ್ರಾಮದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಸನ್ 2008 ರಿಂದ 2011ನೇ ಸಾಲಿನ ವಿದ್ಯಾರ್ಥಿನಿಯರಿಂದ ಗುರುವಂದನಾ ಹಾಗೂ ಸ್ನೇಹಿತೆಯರ ಪುನರ್ಮಿಲನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಶಿಕ್ಷಕರು ವಿದ್ಯಾರ್ಥಿಗಳಿಗೆ ಶಿಕ್ಷಣ ಜೊತೆಗೆ ಸಂಸ್ಕಾರವನ್ನು ನೀಡಿದಾಗ ಮಾತ್ರ ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ ಎಂದು ಹೇಳಿದರಲ್ಲದೇ ಕಳೆದ ಹಲವಾರು ವರ್ಷಗಳ ಹಿಂದೆ ನಮ್ಮ ಶಾಲೆಯಲ್ಲಿ ಶಿಕ್ಷಣ ಕಲಿತು, ಇಂದು ವಿದ್ಯೆ ಹಾಗೂ ಜ್ಞಾನ ನೀಡಿದ ಗುರುಗಳನ್ನು ಒಂದೇ ವೇದಿಕೆಯಲ್ಲಿ ಅವರನ್ನು ಅಭಿಮಾನ ಹಾಗೂ ಗೌರವದಿಂದ ಸನ್ಮಾನಿಸಿದ ಕ್ಷಣ ನಮ್ಮ ಜೀವನದಲ್ಲಿ ಎಂದೂ ಮರೆಯಲಾಗದ ಸಂಗತಿಯಾಗಿದೆ. ಈ ನಿಟ್ಟಿನಲ್ಲಿ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗೂ ಸಂಸ್ಕಾರವನ್ನು ಕಲಿಸಬೇಕು ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿಂಗಪ್ಪ ಬಂಬಲಾಡಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಿವೃತ್ತ ಮುಖ್ಯೋಪಾಧ್ಯಾಯ ಎಂ.ಎಸ್.ಹಿತ್ತಲಮನಿ, ಎಂ.ಎಂ.ಹಾದಿಮನಿ, ಬಿ.ಎಂ.ಓಬನ್ನವರ, ಪ್ರಾಥಮಿಕ ಶಾಲೆಯ ಪ್ರಧಾನಗುರು ಎಸ್.ಡಿ.ಹಂಚಿನಾಳ, ಎಂ.ವೈ.ಹಣಮಂತಗೋಳ, ಬಿ.ಎಲ್.ಪಡಸಲಗಿ, ಎಚ್.ಎಸ್.ಬೆಣಚಿನಮರಡಿ, ಎನ್.ಎನ್.ಕುಲಕರ್ಣಿ, ಆರ್.ಎಂ. ಹಿರೇಮನಿ, ಎಸ್.ಎಸ್.ಪೂಜೇರಿ, ಐ.ಎಂ.ಮುನ್ನೋಳಿ, ಆರ್.ಎಚ್.ತುಳಸಿಗೇರಿ, ಎಸ್.ಆರ್.ಅಲ್ಲಯ್ಯನವರಮಠ, ಕೆ.ವಿ.ಕರನೆಲ್ಲಿ, ಎಸ್.ಡಿ.ಎಂ.ಸಿ ಅಧ್ಯಕ್ಷರುಗಳಾದ ಶ್ರೀಧರ ಕಂಬಾರ, ದಯಾನಂದ ಕಳಸನ್ನವರ, ಬಸವರಾಜ ಗೋಕಾಕ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರು ತಮ್ಮ ಶಾಲೆಯ ದಿನಗಳನ್ನು ಸ್ಮರಿಸಿಕೊಂಡರು. ವಿದ್ಯೆ ಕಲಿಸಿದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಿದರು. ಕಾರ್ಯಕ್ರಮವನ್ನು ಸವಿತಾ ನಂದರಗಿ ಸ್ವಾಗತಿಸಿದರು. ಸುಶೀಲಾ ಮಾಳವ್ವಗೋಳ ನಿರೂಪಿಸಿದರು. ಸವಿತಾ ಹುಣಶ್ಯಾಳಿ ವಂದಿಸಿದರು.

# “ಗ್ಯಾಂಗ್ಸ್ ಆಫ್ ಯುಕೆ” ಪ್ರೇಕ್ಷಕರು ಖಂಡಿತ ಗೆಲ್ಲಿಸ್ತಾರೆ – ರವಿ ಶ್ರೀವತ್ಸ



**ಬೆಳಗಾವಿ ವಾರ್ತೆ ಬೆಂಗಳೂರು:** ಡೆಡ್ಲಿಸೋಮ, ಮಾದೇಶ ಖ್ಯಾತಿಯ ಖ್ಯಾತ ನಿರ್ದೇಶಕ ರವಿ ಶ್ರೀವತ್ಸ ಅವರ ಡೆಡ್ಲಿ ಆರ್ಟ್ಸ್ ಬ್ಯಾನರ್ ನಿರ್ಮಾಣದ 'ಗ್ಯಾಂಗ್ಸ್ ಆಫ್ ಯುಕೆ' ಚಿತ್ರವು ಏ.10ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ.

'ಗ್ಯಾಂಗ್ಸ್ ಆಫ್ ಯುಕೆ'(ಉತ್ತರ ಕರ್ನಾಟಕ) ಚಿತ್ರವು 'ಭೀಮೆಯ ಮಡಿಲಲ್ಲಿ' ಎಂಬ ಉಪಶೀರ್ಷಿಕೆ ಒಳಗೊಂಡಿದ್ದು, ಉತ್ತರ ಕರ್ನಾಟಕದ ಕಪ್ಪು ಮಣ್ಣಿನಲ್ಲಿ ನಡೆದ ಹೆಣ್ಣುಮಕ್ಕಳ ರಕ್ತ ಕಣ್ಣೀರಿನ ಹಾಗೂ ಮಾನವೀಯ ಬಾಂಧವ್ಯಗಳ ನಡುವಿನ ನೈಜ ಘಟನೆ ಆಧರಿಸಿದ ಚಿತ್ರವಿದು. ಬಾಗಲಕೋಟೆ ಜಿಲ್ಲೆಯಲ್ಲೇ ಸಂಪೂರ್ಣ ಚಿತ್ರೀಕರಣವಾಗಿದ್ದು, ಹೆರಕಲ್, ಶಿರೂರು, ಹುನಗುಂದ, ಅಮರಾವತಿ, ಇಳಕಲ್, ಅಮಿನಗಡ ಅಲ್ಲದೆ ಬೆಂಗಳೂರಿನಲ್ಲೂ ಚಿತ್ರೀಕರಿಸಲಾಗಿದೆ. ಉತ್ತರ ಕರ್ನಾಟಕದ ಐವತ್ತಕ್ಕೂ ಹೆಚ್ಚು ರಂಗಭೂಮಿ ಕಲಾವಿದರು, ಹೊಸ ಕಲಾವಿದರು ಅಭಿನಯಿಸಿರುವುದು ಅದರಲ್ಲೂ ಸ್ಥಳೀಯ ಕಲಾವಿದರೇ ಅಭಿನಯಿಸಿರುವುದು ವಿಶೇಷವಾಗಿದೆ. ಸಂತ ಶಿಶುನಾಳ ಶರೀಫರ ನಾಲ್ಕು ಗೀತೆಗಳನ್ನು ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. ರಕ್ತಕ್ಕೆ ರಕ್ತವೇ ಮಜ್ಜನ, ಜಿದ್ದು, ಒಬ್ಬರಿಂದ ಒಬ್ಬರಿಗೆ ಹೇಗೆ ವರ್ಗಾಯಿಸಿಕೊಂಡು ಹೋಗುತ್ತದೆ ಎಂಬುದೇ ಈ ಚಿತ್ರದ ವಿಷಯ. ಇದೀಗ ಇದರ ಚಿತ್ರಗಳು, ವಿಡಿಯೋ ತುಣುಕುಗಳು ಎಲ್ಲೆಡೆ ವೈರಲ್ ಆಗುತ್ತಿವೆ. ಕನ್ನಡ ಚಿತ್ರರಂಗದಲ್ಲಿ ಇದೊಂದು ಧೂಳೆಬ್ಬಿಸುವ ಚಿತ್ರ ಆಗಲಿದೆ. ನನ್ನ ಹಿಂದಿನ ಚಿತ್ರಗಳಿಗಿಂತ ಇದು ವಿಭಿನ್ನವಾಗಿದೆ ಎಂದು ನಿರ್ದೇಶಕ ರವಿ ಶ್ರೀವತ್ಸ ಹೇಳುತ್ತಾರೆ. ಈ ಹಿಂದಿನ ತಮ್ಮ ಚಿತ್ರಗಳನ್ನು ಕನ್ನಡಿಗರು ಗೆಲ್ಲಿಸಿದ್ದಾರೆ ಈ ಚಿತ್ರವನ್ನೂ ಗೆದ್ದೇ ಗೆಲ್ಲಿಸುತ್ತಾರೆ ಎಂಬ ಭರವಸೆಯಲ್ಲಿ ಚಿತ್ರತಂಡದೊಂದಿಗೆ ಜನರ ಬಳಿಗೆ ಸಾಗಿ ಮೊದಲ ಹಂತದ ಪ್ರಚಾರಕಾರ್ಯ ಮುಗಿಸಿ ಎರಡನೆ ಹಂತದ ಪ್ರಚಾರ ಕಾರ್ಯ ಆರಂಭಿಸಿದ್ದಾರೆ.

ತಾರಾಗಣದಲ್ಲಿ ಒರಟ ಪ್ರಶಾಂತ್, ಕಿಂಗ್ ಮುನಿ, ಸೋನು ಉಪಾಧ್ಯ, ಪೃಥ್ವಿ ಸುಬ್ಬಯ್ಯ, ಕೆ.ಆರ್ ಅಮೋಘ, ಸತ್ಯ, ಕೋಟೆ ಪ್ರಭಾಕರ, ಬಿ.ನವೀನ ಕಷ್ಣ. ಜೋತಿಷ್ ಶೆಟ್ಟಿ, ಪದ್ಮವಾಸಂತಿ, ಉಗ್ರಂ ರೆಡ್ಡಿ, ವಿಕಾಸ ಮದಕರಿ, ಕಿರಣ, ದಿಲ್ಲನ್ ಚೆಂಗಪ್ಪ, ಮಹಾಂತೇಶ ಗಜೇಂದ್ರಗಡ, ಮಹಾಂತೇಶ ಹಳ್ಳೂರ, ಅಮತ್ ಹಿರಣ್ಯ, ಗುರುರಾಜ ಗೌಡ, ನಂಜು ಸಿದ್ದಪ್ಪ, ರಮೇಶ ಮದಗುಂದ, ಸಕ್ಕರೆನಾಡು ಉಮೇಶ್ ಠಂಕಸಾಲಿ ಅಲ್ಲದೆ ಉತ್ತರ ಕರ್ನಾಟಕದ ಸ್ಥಳೀಯ ಕಲಾವಿದರನ್ನೂ ಇದರಲ್ಲಿ ಬಳಸಿಕೊಳ್ಳಲಾಗಿದೆ. ತಾಂತ್ರಿಕ ವರ್ಗದಲ್ಲಿ ಛಾಯಾಗ್ರಹಣ ಆರ್.ಗಿರಿ, ಸಂಭಾಷಣೆ ಎಂ.ಎಸ್.ರಮೇಶ, ಸಂಗೀತ ಸುಕುಮಾರ, ಸಂಕಲನ ಲಕ್ಷ್ಮೀನಾರಾಯಣ ರೆಡ್ಡಿ, ಸಾಹಸ ಥ್ರಿಲ್ಲರ್ ಮಂಜು, ಪ್ರಸಾಧನ ರಾಜೇಶ್, ವಸವಿನ್ಯಾಸ ಪುಟ್ಟರಾಜು, ಡಬ್ಬಿಂಗ್ ಆನಂದ, ಎಫೆಕ್ಸ್ ಸೇತು, ಪಿಆರ್‌ಓ ನಾಗೇಂದ್ರ, ಡಾ.ಪ್ರಭು ಗಂಜಿಹಾಳ, ಡಾ. ವೀರೇಶ್ ಹಂಡಿಗಿ ಸಹಾಯಕ ನಿರ್ದೇಶನ ರಾವಣ ಅವರದ್ದು ಇದೆ. ಚಿತ್ರದ ಕಥೆ ಕ್ಷಣಕ್ಷಣಕ್ಕೂ ರೋಚಕವಾಗಿದ್ದು ಪ್ರೇಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಚಿತ್ರಮಂದಿರಕ್ಕೆ ಬಂದು ಸಿನಿಮಾ ವೀಕ್ಷಿಸಿ ಯಶಸ್ವಿಗೊಳಿಸಬೇಕೆಂದು ತಿಳಿಸಿದರು.

**–ಡಾ.ಪ್ರಭು ಗಂಜಿಹಾಳ**
**ಮೊ:9448775346**

# ಶಿವಶರಣೆ ಅಕ್ಕಮಹಾದೇವಿಯ ಜಯಂತಿ ಉತ್ಸವ

**ಬೆಳಗಾವಿ ವಾರ್ತೆ ಹುಬ್ಬಳ್ಳಿ:** ಜಾಗತಿಕ ಲಿಂಗಾಯತ ಮಹಾಸಭಾ ಬೆಂಗಳೂರು, ಧಾರವಾಡ ಜಿಲ್ಲಾ ಘಟಕ, ಮಹಿಳಾ ಘಟಕ, ಯುವ ಘಟಕ, ಬಸವಕೇಂದ್ರ-ಮಹಿಳಾ ಘಟಕದ ಹಾಗೂ ಬಸವ ಪರ ಸಂಘಟನೆಗಳ ಸಹಯೋಗದಲ್ಲಿ ಸ್ತ್ರೀ ಶಕ್ತಿಯ ಪ್ರತಿಪಾ ದಕಿ, ಮಹಾನ್ ಸಾಧಕಿ, ಕನ್ನಡದ ಪ್ರಪ್ರ ಥಮ ಕವಯಿತ್ರಿ ಶಿವಶರಣೆ ಅಕ್ಕಮಹಾ ದೇವಿಯ ಜಯಂತಿ ಉತ್ಸವ ಕಾರ್ಯಕ್ರಮ ಹಾಗೂ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಶಿವಶರಣೆ ಅಕ್ಕಮಹಾದೇವಿಯ ಭಾವ ಚಿತ್ರದ ಭವ್ಯ ಮೆರವಣಿಗೆಯಲ್ಲಿ ಜಾಂಜ, ಮಹಿಳಾ ತಂಡಗಳಿಂದ ವಚನ ಗಾಯನ, ಸಾಮೂಹಿಕ ನೃತ್ಯ, ಸಂಗೀತ, ಘೋಷಣೆಗಳೊಂದಿಗೆ ವಿಜೃಂಭಣೆಯಿಂದ ಜರುಗಿತು. ಜಾಗತಿಕ ಲಿಂಗಾಯತ ಮಹಾಸಭಾ ಧಾರವಾಡ ಘಟಕದ ಅಧ್ಯಕ್ಷ ಎಂ.ವಿ. ಗೊಂಗಡಶೆಟ್ಟಿ , ಖ್ಯಾತ ಸಾಹಿತಿಗಳು, ಹೃದಯ ರೋಗ ತಜ್ಞ ವೈದ್ಯರಾದ ಡಾ ವಿಜಯಲಕ್ಷ್ಮಿ ಬಾಳೇಕುಂದ್ರಿ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ ಕಾರ್ಯದರ್ಶಿ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಘಟಕದ ಉಪಾಧ್ಯಕ್ಷ, ಕರ್ನಾಟಕ ವಚನ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ, ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ ಟ್ರಸ್ಟಿ, ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ, ಸೋಹನ್ ಸುರೇಶ್ ಹೊರಕೇರಿ, ಶಂಕರ್ ಕೋಳಿವಾಡ, ದಾಕ್ಷಾಯಣಿ ಕೋಳಿವಾಡ, ಸವಿತಾ ನಡಕಟ್ಟಿ , ಶಶಿಧರ್ ಕರವೀರಶೆಟ್ಟರ್,. ಬಸವರಾಜ ಲಿಂಗಶೆಟ್ಟರ್ , ಎಸ್ ವಿ ಪಟ್ಟಣಶೆಟ್ಟಿ, ಕೆ ಎಸ್ ಇನಾಮತಿ , ಎಸ್ ವಿ ಕೋಟಗಿ, ಡಾ ಲಿಂಗರಾಜ ಅಂಗಡಿ, ಪ್ರೊ ಕೆ ಎಸ್ ಕೌಜಲಗಿ, ಡಾ ಸ್ನೇಹಾ ಭೂಸನೂರ, ಸುನೀಲಾ ಬ್ಯಾಹಟ್ಟಿ, ಶೋಭಾ ಜಾಬಿನ್ , ವಿದ್ಯಾ ವಂಟಮುರಿ , ಜಯಶ್ರೀ ಹಿರೇಮಠ , ಸಿದ್ದಮ್ಮ ಅಡವೆನ್ನವರ , ಡಾ ಸರ್ವಮಂಗಳಾ ಕುದರಿ , ಸರೋಜಾ ಮೇಟಿ , ಭಾರತಿ ವಾಲಿ , ಮೃತ್ಯುಂಜಯ ಮಟ್ಟಿ, ಶಿವಯೋಗಿ ಮೂಖರ್ಂಡೆ , ಪ್ರಭು ಅಂಗಡಿ, ಪ್ರಭು ಶೆಟ್ಟರ್ , ಪ್ರಭಾ ಯರೇಸಿಮಿ , ಈರಪ್ಪ ಎಮ್ಮಿ , ಸುರೇಶ್ ಹುಗ್ಗಿಶೆಟ್ಟರ, ಚಿಂತಾಮಣಿ ಸಿಂಧಗಿ , ವಿಜಯಲಕ್ಷ್ಮಿ ಗಂಗಲ್ , ಆಶಾ ಕವಳಿ , ಲಕ್ಷ್ಮೀ ಲಿಂಗಶೆಟ್ಟರ್ , ಅನಿಲ್ ಲಿಂಗಶೆಟ್ಟರ್ , ನೀಲಾಂಬಿಕಾ ಇನಾಮತಿ, ಉಮಾ ಹುಲಿಕಂತಿಮಠ , ಪ್ರಜ್ಞಾ ನಡಕಟ್ಟಿ , ಶಶಿಕಲಾ ಕೊಡೇಕಲ್ , ಸೇರಿದಂತೆ ನೂರಾರು ಸಂಖ್ಯೆ ಯಲ್ಲಿ ಬಸವಾಭಿಮಾ ನಿಗಳು, ಲಿಂಗಾಯತರು, ಸರ್ವ ಸಮಾಜ ದವರು, ಆಸಕ್ತರು ಭಾಗವಹಿಸಿ, ಅತ್ಯಂತ ಯಶಸ್ವಿಯಾಗಿ ಪೂರ್ಣಗೊಳಿಸಿದರು



# ಅಶ್ವಿನಿ ಬಿಸ್ವಾಗರ ಅವರಿಗೆ ಸಾವಿತ್ರಿಬಾಯಿ ಪುಲೆ ಪ್ರಶಸ್ತಿ: ಗಣ್ಯರಿಂದ ಗೌರವ ಸನ್ಮಾನ



**ಬೆಳಗಾವಿ ವಾರ್ತೆ ಅಥಣಿ:** ತಾಲೂಕಿನ ನದಿ ಇಂಗಳಗಾಂವ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ಸಹ ಶಿಕ್ಷಕಿಯಾದ ಶ್ರೀಮತಿ ಅಶ್ವಿನಿ ಬಿಸ್ವಾಗರ ಅವರ ಹತ್ತು ವರ್ಷ ಸೇವೆಯನ್ನು ಪರಿಗಣಿಸಿ ಜಿಲ್ಲಾ ಮಟ್ಟದ ಸಾವಿತ್ರಿಬಾಯಿ ಪುಲೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಇತ್ತಿಚಿಗೆ ಅಥಣಿ ಪಟ್ಟಣದ ರಾಯಲ್ ಹಾಲನಲ್ಲಿ ನಡೆದ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಬೆಂಗಳೂರು ಹಾಗೂ ಚಿಕ್ಕೋಡಿ ಜಿಲ್ಲೆ ಅಥಣಿ ಘಟಕದ ವತಿಯಿಂದ ನಡೆದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಮಾತೆ ಸಾವಿತ್ರಿಬಾಯಿ ಪುಲೆಯವರ ಜಯಂತಿ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಗಿದ್ದು ಅವರನ್ನು ಅಥಣಿ ತಾಲೂಕಾ ಶಿಕ್ಷಕರ ಸಂಘ ಹಾಗೂ ನದಿ ಇಂಗಳಗಾಂವ ಕರ್ನಾಟಕ ಪಬ್ಲಿಕ್ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

# ಶಿಕ್ಷಣದಿಂದ ಮಾತ್ರ ಸಮಾಜದ ಸರ್ವತೋಮುಖ ಅಭಿವೃದ್ಧಿ ಸಾಧ್ಯ

**ಬೆಳಗಾವಿ ವಾರ್ತೆ ಅಥಣಿ:** "ಬಾಬು ಜಗಜೀವನ ರಾಮ್ ಅವರು ಕೇವಲ ಒಬ್ಬ ನಾಯಕರಲ್ಲ, ಅವರು ದೇಶದ ಹಸಿರು ಕ್ರಾಂತಿಯ ಹರಿಕಾರರು. ಅವರ ತತ್ವಗಳನ್ನು ಅಳವಡಿಸಿಕೊಂಡು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿದಾಗ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ," ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಸ್ಥಳೀಯ ತಾಲೂಕು ಆಡಳಿತ, ತಾಲೂಕು ಪಂಚಾಯತ್, ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಭಾರತದ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ ರಾಮ್ ಅವರ 119ನೇ ಜಯಂತಿ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದ ಅವರು ಗಾಂಧೀಜಿ, ಅಂಬೇಡ್ಕರ್ ಹಾಗೂ ಜಗಜೀವನ ರಾಮ್ ಅವರು ಅಸ್ಪೃಶ್ಯತೆ ನಿವಾರಣೆಗಾಗಿ ಜೀವನವನ್ನೇ ಮುಡಿಪಾಗಿಟ್ಟ ಮಹನೀಯರು. ಕೇಂದ್ರದ ವಿವಿಧ ಇಲಾಖೆಗಳಲ್ಲಿ ಅವರು ತೋರಿದ ದಕ್ಷತೆ ಇಂದಿನ ಆಡಳಿತಗಾರರಿಗೆ ಮಾದರಿ. ಕೃಷಿ ಕ್ಷೇತ್ರದಲ್ಲಿ ಅವರು ತಂದ ಕ್ರಾಂತಿಕಾರಿ ಬದಲಾವಣೆಗಳಿಂದಾಗಿ ದೇಶ ಆಹಾರ ಭದ್ರತೆ ಪಡೆಯಲು ಸಾಧ್ಯವಾಯಿತು" ಎಂದರು ಈ ವೇಳೆ ಉಪನ್ಯಾಸವನ್ನು ಟಿ ಎಸ್ ವಂಟಗೂಡಿ ನೀಡಿದರು ಅಥಣಿ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಸಿದ್ದಾರ್ಥ ಸಿಂಗೆ, ಪುರಸಭೆ ಅಧ್ಯಕ್ಷೆ ಶಿವಲೀಲಾ ಬೂಟಾಳಿ ಹಾಗೂ ಉಪಾಧ್ಯಕ್ಷೆ ಭುವನೇಶ್ವರಿ ಯಂಕಚ್ಚಿ ಮಾತನಾಡಿದರು.

ಈ ಸಂದರ್ಭದಲ್ಲಿ ತಾಲೂಕಾ ದಂಡಾಧಿಕಾರಿ ಸಿದ್ರಾಯ ಭೋಸಗಿ ಡಾ. ಅನಿಲ ಸೌದಾಗರ್, ದಿಲೀಪ್ ಕಾಂಬಳೆ, ವಿಲೀನರಾಜ ಯಳಮಲ್ಲೆ, ಕಲ್ಲೇಶ ಮಡ್ಡಿ, ಸದಾಶಿವ ಕ್ಷೀರಸಾಗರ,ಶಿವಾನಂದ ಸೌದಾಗರ , ಸುಂದರ ಸೌದಾಗರ,ಮಾಂತೇಶ ಬಾಡಗಿ, ಮಂಜು ಹೋಳಿಕಟ್ಟಿ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳಾದ ಪರಶುರಾಮ ಪತ್ತಾರ, ಶಿವಾನಂದ ಕಲ್ಲಾಪುರ, ಎಂ.ಆರ್. ಮುಂಜಿ , ವೀರಣ್ಣ ವಾಲಿ, ಅಶೋಕ ಗುಡಿಮನಿ, ಮಂಜುನಾಥ ಸೌಂದಲಗೇಕರ, ಇನ್ನಿತರರು ಉಪಸ್ಥಿತರಿದ್ದರು.



ತಾಲೂಕಿನ ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಕೇಂದ್ರೀಯ ವಿದ್ಯಾಲಯ ಆರಂಭವಾಗಿದ್ದು, ಪ್ರವೇಶ ಪ್ರಕ್ರಿಯೆ ಚಾಲನೆಯಲ್ಲಿದೆ. ಇದರ ಸದುಪಯೋಗ ಪಡೆಯಬೇಕು. ಶೀಘ್ರದಲ್ಲೇ ಅಮ್ಮಾಜೇಶ್ವರಿ ಯೋಜನೆ ಉದ್ಘಾಟನೆಗೆ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳು ಆಗಮಿಸಲಿದ್ದು, ಅದೇ ಸಂದರ್ಭದಲ್ಲಿ ಕೃಷಿ ಕಾಲೇಜು ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಗುವುದು.

ಸುಮಾರು 36 ಕೋಟಿ ರೂಪಾಯಿ ವೆಚ್ಚದಲ್ಲಿ ಕಾರ್ಮಿಕರ ಮಕ್ಕಳಿಗಾಗಿ ಸುಸಜ್ಜಿತ ವಸತಿ ಶಾಲೆಯನ್ನು ನಿರ್ಮಿಸಲಾಗುವುದು



**ಬೆಳಗಾವಿ ವಾರ್ತೆ ಹುಬ್ಬಳ್ಳಿ:** ಸ್ತ್ರೀ ಶಕ್ತಿಯ ಪ್ರತಿಪಾದಕಿ, ಮಹಾನ್ ಸಾಧಕಿ, ಕನ್ನಡದ ಪ್ರಪ್ರಥಮ ಕವಯಿತ್ರಿ ಶಿವಶರಣೆ ಅಕ್ಕಮಹಾದೇವಿಯ ಜಯಂತಿ ಉತ್ಸವ ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಶಿವಶರಣೆ ಅಕ್ಕಮಹಾದೇವಿಯ ಭಾವಚಿತ್ರದ ಭವ್ಯ ಮೆರವಣಿಗೆಯಲ್ಲಿ 12ನೇ ಶತಮಾನದ ಅನುಭವ ಮಂಟಪದ ಅಧ್ಯಕ್ಷ, ಶ್ರೇಷ್ಠ ವಚನಕಾರ ಅಲ್ಲಮಪ್ರಭುದೇವರ ಪಾತ್ರದಲ್ಲಿ ವೇಷಭೂಷಣ ತೊಟ್ಟು ಪಾಲ್ಗೊಂಡಿದ್ದ ಜೈಂಟ್ಸ ಗ್ರುಪ್ ಆಫ್ ಹುಬ್ಬಳ್ಳಿ ಸಹೇಲಿ ಹಿಂದಿನ ಅಧ್ಯಕ್ಷ ಭಾರತಿ ವಾಲಿ ಅವರನ್ನು ಸೋಹನ್ ಸುರೇಶ್ ಹೊರಕೇರಿ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ ಕಾರ್ಯದರ್ಶಿ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಘಟಕದ ಉಪಾಧ್ಯಕ್ಷ, ಕರ್ನಾಟಕ ವಚನ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ, ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ ಟ್ರಸ್ಟಿ, ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ ಅವರು ಮೆಚ್ಚುಗೆ ವ್ಯಕ್ತಪಡಿಸಿ, ಅಭಿನಂದನೆಗಳನ್ನು ಸಲ್ಲಿಸಿದರು. ಶುಭ ಕೋರಿದರು. ಸುಜಯ್ ಸುರೇಶ್ ಹೊರಕೇರಿ, ಸಹನಾ ಸುರೇಶ್ ಹೊರಕೇರಿ, ಸುಪ್ರಿಯಾ ಸುರೇಶ್ ಹೊರಕೇರಿ, ಶೋಭಾ ಜಾಬಿನ್, ವಿದ್ಯಾ ವಂಟಮುರಿ, ಸಿದ್ದಮ್ಮ ಅಡವೆನ್ನವರ , ಮೃತ್ಯುಂಜಯ ಮಟ್ಟಿ , ಚನ್ನಬಸಪ್ಪ ಧಾರವಾಡಶೆಟ್ಟರ್. ಮುಂತಾದವರು ಇದ್ದರು.

# ಬಾಬು ಜಗಜೀವನ ರಾಮ್ ಜಯಂತಿ ಆಚರಣೆ ನಿರ್ಲಕ್ಷ್ಯ; ಕುಡಿದ ಮತ್ತಿನಲ್ಲಿ ಬಂದ ಅಧಿಕಾರಿಯಿಂದ ಅಗೌರವ



**ಬೆಳಗಾವಿ ವಾರ್ತೆ ಅಥಣಿ:** ತಾಲೂಕಿನ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗದ ಕಚೇರಿಯಲ್ಲಿ ಇಂದು ಮಾಜಿ ಉಪ ಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನ ರಾಮ್ ಅವರ ಜಯಂತಿಯನ್ನು ಆಚರಿಸದೆ ಅಧಿಕಾರಿಗಳು ಅಗೌರವ ತೋರಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಭಾನುವಾರ ಏಪ್ರಿಲ್ 5 ರಂದು ಬಾಬು ಜಗಜೀವನ ರಾಮ್ ಅವರ ಜಯಂತಿ ಇದ್ದರೂ, ಕಚೇರಿಯಲ್ಲಿ ಯಾವುದೇ ಪೂರ್ವಸಿದ್ಧತೆ ಅಥವಾ ಪೂಜಾ ಕಾರ್ಯಕ್ರಮ ಹಮ್ಮಿಕೊಂಡಿರಲಿಲ್ಲ. ಈ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರನ್ನು (ಎಇಇ) ದೂರವಾಣಿ ಮೂಲಕ ಸಂಪರ್ಕಿಸಿದಾಗ, "ಇಂದು ಕಚೇರಿ ರಜೆ ಇದೆ, ನಾನು ಕೂಡ ರಜೆಯಲ್ಲಿದ್ದೇನೆ" ಎಂದು ಬೇಜವಾಬ್ದಾರಿಯ ಉತ್ತರ ನೀಡಿದ್ದಾರೆ ಎನ್ನಲಾಗಿದೆ. ಸರ್ಕಾರದ ಆದೇಶದಂತೆ ಮಹಾಪುರುಷರ ಜಯಂತಿಗಳನ್ನು ಕಡ್ಡಾಯವಾಗಿ ಆಚರಿಸಬೇಕಿದ್ದರೂ, ಜವಾಬ್ದಾರಿಯುತ ಸ್ಥಾನದಲ್ಲಿರುವ ಅಧಿಕಾರಿಯೇ ಇಂತಹ ಹೇಳಿಕೆ ನೀಡಿರುವುದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಘಟನೆಗೆ ಸಂಬಂಧಿಸಿದಂತೆ ಮಧ್ಯಾಹ್ನ ಸುಮಾರು 2 ಗಂಟೆಯ ಸುಮಾರಿಗೆ ಕಚೇರಿಯ ಅಧಿಕಾರಿಯೊಬ್ಬರು ಸ್ಥಳಕ್ಕೆ ಆಗಮಿಸಿದ್ದಾರೆ. ಆದರೆ, ಅವರು ಪೂರ್ಣ ಪ್ರಮಾಣದಲ್ಲಿ ಮದ್ಯ ಸೇವಿಸಿ ಕುಡಿದ ಮತ್ತಿನಲ್ಲಿ ಪೂಜೆ ಮಾಡಲು ಮುಂದಾಗಿದ್ದು ಎಂದು ಆರೋಪಿಸಲಾಗಿದೆ. ಇದನ್ನು ಗಮನಿಸಿದ ಸ್ಥಳೀಯ ಪತ್ರಕರ್ತರು, "ಮಹನೀಯರ ಜಯಂತಿಯಂದು ಕುಡಿದು ಬಂದು ಪೂಜೆ ಮಾಡುವುದು ಸರಿಯೇ?" ಎಂದು ಪ್ರಶ್ನಿಸಿದ್ದಾರೆ.

ಪತ್ರಕರ್ತರ ಈ ನೇರ ಪ್ರಶ್ನೆಯಿಂದ ಕಂಗಾಲಾದ ಸದರಿ ಅಧಿಕಾರಿ, ಉತ್ತರಿಸಲಾಗದೆ ಕಚೇರಿಯನ್ನು ತೆರೆದ ಸ್ಥಿತಿಯಲ್ಲೇ ಬಿಟ್ಟು ಅಲ್ಲಿಂದ ಕಾಲ್ಕಿತ್ತಿದ್ದಾರೆ. ಸರ್ಕಾರದ ಮಹತ್ವದ ಜಯಂತಿಗಳನ್ನು ಆಚರಿಸುವಲ್ಲಿ ತೋರಿರುವ ಈ ನಿರ್ಲಕ್ಷ್ಯ ಮತ್ತು ಮದ್ಯ ಸೇವಿಸಿ ಕಚೇರಿಗೆ ಬಂದ ಅಧಿಕಾರಿಯ ವರ್ತನೆಗೆ ವ್ಯಾಪಕ ಖಂಡನೆ ವ್ಯಕ್ತವಾಗಿದ್ದು

ಸ್ಥಳದಲ್ಲಿ ಪ್ರತಿಭಟಿಸಿ ಅಧಿಕಾರಿ ವಿರುದ್ಧ ಆಕ್ರೋಶ ವ್ಯಕ್ತ ಪಡಿಸಿದ ಮುಖಂಡ ಶಿವಾನಂದ ಸವದಾಗರ ತಾಲೂಕ ಆಡಳಿತದ ವತಿಯಿಂದ ಡಾ. ಬಾಬು ಜಗಜೀವನ ರಾಮ್ ಅವರ ಜಯಂತಿಯು ಅರ್ಥಪೂರ್ಣವಾಗಿ ಜರುಗಿದ್ದು ಇದೆ ರೀತಿ ಎಲ್ಲ ಸರ್ಕಾರಿ ಕಚೇರಿ,ಬ್ಯಾಂಕ್ ಹಾಗೂ ಶಾಲಾ ಕಾಲೇಜುಗಳಲ್ಲಿ ಮಹನೀಯರ ಜಯಂತಿಗಳನ್ನು ಆಚರಿಸಬೇಕೆಂದು ಆದೇಶ ವಿದ್ದರು ತಾಲೂಕಿನ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗದ ಕಚೇರಿಯಲ್ಲಿ ಡಾ. ಬಾಬು ಜಗಜೀವನ ರಾಮ್ ಅವರ ಜಯಂತಿ ಆಚರಣೆ ಮಾಡದೆ ಇರುವದು ಖೇದನಿಯ ಇದಕ್ಕೆ ನಾನು ಸಮಾಜ ವತಿಯಿಂದ ಖಂಡಿಸುತ್ತೇನೆ.

ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ಈ ಕೂಡಲೇ ಮಧ್ಯಪ್ರವೇಶಿಸಿ, ಕರ್ತವ್ಯ ಲೋಪ ಎಸಗಿದವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

BELAGAVI VARTE Kannada Daily morning news paper Editor, Printer, Publisher and Owned by MAHESHWARI BHIMASHI BHARAMANNAVAR, 221/1A/1A/1A MAHALINGESHWAR NAGAR, NEAR BCA HOSTEL BELAGAVI KARNATAKA 591307. Printed at RAJADHANI PRINTING PRESS, CTS NO.1720/B1, SHOP NO.2 KELKARBAG, BELAGAVI, KARNATAKA - 590001